
# ಕರ್ನಾಟಕ ಶ್ರೀರಾಮಕೃಷ್ಣ ಭಾವಧಾರೆಗೆ ಸ್ವಾಮಿ ಪುರುಷೋತ್ತಮಾನಂದಜೀಯವರ ಕೊಡುಗೆ

**ಸ್ವಾಮಿ ವೀರೇಶಾನಂದ ಸರಸ್ವತೀ**

ಕರ್ನಾಟಕದಲ್ಲಿ ದಿವ್ಯತ್ರಯರ ಭಾವಧಾರೆ ವ್ಯಾಪಕವಾಗಿ ಹರಡುವುದರಲ್ಲಿ ಸ್ವಾಮಿ ಪುರುಷೋತ್ತಮಾನಂದಜೀಯವರು ವಹಿಸಿದ ಪಾತ್ರ ಅನನ್ಯವಾದುದು. ಪ್ರಧಾನವಾಗಿ ಭಜನೆಗಳ ಮೂಲಕ ಮನೆಮನೆಗೆ ಶ್ರೀರಾಮಕೃಷ್ಣರ, ಶ್ರೀಮಾತೆಯವರ, ಸ್ವಾಮೀಜಿಯವರ ಜೀವನ-ಸಂದೇಶಗಳನ್ನು ಅವರು ಕೊಂಡೊಯ್ದರು. ಪ್ರವಚನ, ಗ್ರಂಥರಚನೆ, ಸಂಘಟನೆ - ಈ ಎಲ್ಲ ಕ್ಷೇತ್ರಗಳನ್ನೂ ಅವರು ಭಾವಧಾರೆಯನ್ನು ಹರಡಲು ಬಳಸಿಕೊಂಡರು. ಅವರ ಜೀವನ, ಸಾಧನೆಗಳ ಬಗ್ಗೆ ಬರೆದಿರುವ ಲೇಖಕರು ತುಮಕೂರು ರಾಮಕೃಷ್ಣ-ವಿವೇಕಾನಂದ ಆಶ್ರಮದ ಸಂಸ್ಥಾಪಕರು ಹಾಗೂ ಮುಖ್ಯಸ್ಥರು. ಉತ್ತಮ ವಾಗ್ಮಿಗಳೂ, ಬರಹಗಾರರೂ ಆಗಿರುವ ಅವರು ಉತ್ತಮ ಸಂಘಟಕರೂ ಆಗಿದ್ದಾರೆ.



ಜಗತ್ತಿನ ಇತಿಹಾಸದಲ್ಲಿ ದಿವ್ಯತ್ರಯರೆಂದೇ ಗೌರವಿಸಲ್ಪಡುವ ಭಗವಾನ್ ಶ್ರೀರಾಮಕೃಷ್ಣ, ಶ್ರೀಮಾತೆ ಶ್ರೀಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಜೀವನ-ಸಂದೇಶಗಳಿಗೆ ಅಪಾರವಾದ ಮಹತ್ವವಿದೆ. ಕಾರಣಗಳೆಂದರೆ ಅವರುಗಳೆಂದಿಗೂ ಪೌರಾಣಿಕ ಚೌಕಟ್ಟಿಗಷ್ಟೇ ಸೀಮಿತರಾಗಲಿಲ್ಲ! ಅಥವಾ ನಿರ್ದಿಷ್ಟ ಜಾತಿಗೋ, ಇತಿಹಾಸದ ಸೀಮಿತ ಕಾಲಘಟ್ಟಕ್ಕಷ್ಟೇ ಪ್ರಸ್ತುತರಾಗಲಿಲ್ಲ!! ಘನ ವೇದಾಂತ ಸತ್ಯಗಳನ್ನು ಸಾಧನೆಯ ಮೂಲಕ ತಾವು ಸಾಧಿಸಿದರು, ಸಾಧಿಸಿದ್ದನ್ನು ಅತ್ಯಂತ ಸರಳವಾಗಿ ಆದರೆ ಮೂಲ ಸಿದ್ಧಾಂತಕ್ಕೆ ಲೋಪ ಬಾರದಂತೆ ಪರಿಣಾಮಕಾರಿಯಾಗಿ ಬೋಧಿಸಿದರು ಮತ್ತು ಜಗತ್ತಿನಿಂದ ತಮ್ಮ ಮರ್ತ್ಯ ಶರೀರದ ನಿರ್ಗಮನದ ನಂತರವೂ ತಾವು ಬದುಕಿ, ಸಾರಿದ ಮೌಲ್ಯಾದರ್ಶಗಳನ್ನು ಮುಂದುವರಿಸಿಕೊಂಡು ಹೋಗಲು ತ್ಯಾಗ ಮತ್ತು ಸೇವೆ ಎಂಬ ತತ್ತ್ವಾದರ್ಶಗಳನ್ನಾಧರಿಸಿದ ಶ್ರೇಷ್ಠ ಪರಂಪರೆಯ ಸ್ಥಾಪನೆಗೆ ಅನುವು ಮಾಡಿಕೊಟ್ಟು ಜಗತ್ತಿಗೆ ಮಹದುಪಕಾರಗೈದಿದ್ದಾರೆ.

ದಿವ್ಯತ್ರಯರನ್ನು ಕುರಿತಾಗಿ ವಿಶ್ವವಿಖ್ಯಾತರೆಂದೇ ಗೌರವಿಸಲ್ಪಟ್ಟ ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಶ್ರೀ ರವೀಂದ್ರನಾಥ ಟಾಗೋರ್ ಮತ್ತು ರೋಮಾರೋಲಾ, ಕ್ರಾಂತಿಕಾರಿ ಸಂತರೆನಿಸಿದ ಮಹರ್ಷಿ ಅರವಿಂದರು ಮತ್ತು ಕಾಜಿ ನಸರುಲ್ ಇಸ್ಲಾಂ, ಶ್ರೇಷ್ಠ ಚಿಂತಕರಾದ ಕ್ರಿಸ್ಟೋಫರ್ ಇಷರ್‌ವುಡ್ ಮತ್ತು ಆರ್ನಾಲ್ಡ್ ಟಾಯ್ನ್‌ಬಿ, ರಾಷ್ಟ್ರಕವಿಗಳೆಂದೇ ಖ್ಯಾತರಾದ ಕುವೆಂಪು ಮತ್ತು ಡಾ. ಜಿ.ಎಸ್. ಶಿವರುದ್ರಪ್ಪ ಇವರೇ ಮೊದಲಾದವರು ವ್ಯಕ್ತಪಡಿಸಿರುವ ನುಡಿಪುಷ್ಪಗಳನ್ನು ಅವಲೋಕಿಸಿದಾಗ, ದಿವ್ಯತ್ರಯರ ಜೀವಂತ ಸತ್ವಪೂರ್ಣ ಚಿಂತನೆಗಳು ಜಗತ್ತಿಗೆ ಶಾಶ್ವತ ಸ್ಫೂರ್ತಿಯ ಸ್ರೋತವಾಗಿ ಪರಿಗಣಿತವಾಗಿರುವುದು ಸತ್ಯ.

ಭಗವಾನ್ ಶ್ರೀರಾಮಕೃಷ್ಣರನ್ನು ಕುರಿತು ಪ್ರೊ. ಆರ್ನಾಲ್ಡ್ ಟಾಯ್ನ್‌ಬಿ ಹೇಳುತ್ತಾರೆ: ''ಶ್ರೀರಾಮಕೃಷ್ಣರ ದಿವ್ಯ ಸಂದೇಶದಲ್ಲಿ ಅಡಕವಾದ ವೈಶಿಷ್ಟ್ಯಪೂರ್ಣ ಅಂಶವೆಂದರೆ, ಅದು ಬಹುಮುಖವಾದ ಧಾರ್ಮಿಕ ಅಂತರ್ದೃಷ್ಟಿ ಮತ್ತು ಅನುಭವಗಳನ್ನು ಮಾನ್ಯ ಮಾಡಿರುವುದು. ಈ ಮುಖ್ಯ ಅಂಶವನ್ನು ಆಧರಿಸಿ ನನ್ನ ಪ್ರಾಮಾಣಿಕ ಅಭಿಪ್ರಾಯವನ್ನು ವ್ಯಕ್ತಪಡಿಸುವುದಾದರೆ ಹಿಂದೂಧರ್ಮವು ಜಗತ್ತಿನ ಪಾಶ್ಚಾತ್ಯ ಧರ್ಮಗಳಿಗಿಂತಲೂ ಅತ್ಯಧಿಕ ಆಳದ ಸತ್ಯವನ್ನು ಕಂಡುಕೊಂಡಿದೆ. ಭಾರತೀಯರ ಈ ಧರ್ಮ ಕುರಿತಾದ ಸತ್ಯವು ಇಂದು ಸಮಗ್ರ ಮಾನವಕುಲಕ್ಕೇ ಅರಿವಾಗಬೇಕೆನ್ನುವುದೇ ಗುರುತರ ಹಾಗೂ ಮೌಲ್ಯಯುತವಾದ ವಿಚಾರವಾಗಿದೆ.''

ಜಗತ್ತಿನಲ್ಲಿ ಎಲ್ಲ ಕಾಲಘಟ್ಟದಲ್ಲೂ ನಾಸ್ತಿಕತೆ ತನ್ನ ಅಸ್ತಿತ್ವವನ್ನು ಪ್ರದರ್ಶಿಸುವ ಪ್ರಯತ್ನವನ್ನು ಮಾಡುತ್ತಲೇ ಸಾಗುತ್ತದೆ. ಕೈಗಾರಿಕಾ ಕ್ರಾಂತಿಯಾದ ನಂತರ ನಾಸ್ತಿಕ್ಯವಾದವು ಸ್ವಲ್ಪಮಟ್ಟಿಗೆ ಮೇಲುಗೈ ಸಾಧಿಸಿತೋ ಎಂಬ ಅನುಮಾನವೂ ಮೂಡುತ್ತದೆ! ಅಮೇರಿಕಾದ ಸುಪ್ರಸಿದ್ಧ ನಾಟಕಕಾರ ಜಾನ್ ವ್ಯಾನ್ ಡ್ರೂಟೆನ್ ಹೇಳುತ್ತಾನೆ: ''ಹತ್ತೊಂಬತ್ತನೇ ಶತಮಾನದ ಉತ್ತರಾರ್ಧ ಹಾಗೂ ಇಪ್ಪತ್ತನೇ ಶತಮಾನದ ಪ್ರಾರಂಭಕಾಲದಲ್ಲಿ ಇದ್ದ ಜಗತ್ತಿನ ಮಾನಸಿಕ ಸ್ಥಿತಿಯನ್ನು ಅವಲೋಕಿಸಿದಾಗ, ಗುರುತ್ವಾಕರ್ಷಣ ನಿಯಮದ ಆವಿಷ್ಕಾರಗೈದ ಐಸಾಕ್ ನ್ಯೂಟನ್, ಪ್ರಾಕೃತಿಕ ವರಣ (ನ್ಯಾಚುರಲ್ ಸೆಲೆಕ್ಷನ್) ನಿಯಮವನ್ನು ನೀಡಿದ ಚಾರ್ಲ್ಸ್ ಡಾರ್ವಿನ್ ಮತ್ತು ಮನೋವೈಜ್ಞಾನಿಕ ಸಿದ್ಧಾಂತವನ್ನು ಪ್ರತಿಪಾದಿಸಿದ ಸಿಗ್ಮಂಡ್ ಫ್ರಾಯ್ಡ್ ಈ ಮೂರೂ ವಿಜ್ಞಾನಿಗಳು ದೇವರನ್ನು ಅನುಕ್ರಮವಾಗಿ ಭೌತಜಗತ್ತು, ಜೀವ ಜಗತ್ತು ಮತ್ತು ಮನೋಜಗತ್ತಿನಿಂದ ಉಚ್ಚಾಟಿಸಿದ್ದಾರೆ!''. ಇಂದ್ರಿಯ

ಗ್ರಾಹ್ಯ ಸತ್ಯಗಳಿಗೆ ಜೋತುಬಿದ್ದ ಪ್ರಪಂಚವು ಒಂದರ್ಥದಲ್ಲಿ ಈ ತೀರ್ಮಾನಕ್ಕೆ ಬಂದಿರಬಹುದೇನೋ! ಆದರೆ ದಿವ್ಯತ್ರಯರು ಸನಾತನ ಧರ್ಮವನ್ನು ಮುಂದಿರಿಸಿಕೊಂಡು ಜಗತ್ತಿನ ಎಲ್ಲ ಧರ್ಮಗಳ ಉದಾತ್ತ ಆದರ್ಶಗಳನ್ನು ಪುನಃಪ್ರತಿಷ್ಠಾಪಿಸಿದರು, ವಿಜ್ಞಾನವು ಎಸೆಯುವ ಸವಾಲುಗಳನ್ನು ಸಮರ್ಥವಾಗಿ ಉತ್ತರಿಸಿದ್ದಲ್ಲದೆ ಅಧ್ಯಾತ್ಮ ಎಂಬುದು ಭೌತಿಕ ವಿಜ್ಞಾನವನ್ನು ಮೀರಿ ಮುಂದುವರೆದ ಉನ್ನತ ಸತ್ಯ ಎಂಬುದನ್ನು ಯಾವುದೇ ಸಂಶಯಗಳಿಗೆ ಆಸ್ಪದವೀಯದೆ ಸಮರ್ಥಿಸುವಲ್ಲಿ ಯಶಸ್ವಿಯಾದರು.

ದಿವ್ಯತ್ರಯರು, 'ನಂಬಿಕೆ' ಎಂಬ ಸರ್ವಜನಮಾನ್ಯವಾದ ಹಾಗೂ ಸಾರ್ವಕಾಲಿಕ ಮಹತ್ವ ಹೊತ್ತ ಮಹಾಮೌಲ್ಯವನ್ನು ಕನಿಷ್ಠ ಅನುಮಾನಕ್ಕೂ ಎಡೆಮಾಡಿಕೊಡದೆ ವಿವರಿಸಿದ ವಿಧಾನವು ಮನೋಜ್ಞವಾದದ್ದು. ಶ್ರೀಮಾತೆಯವರು ಹೇಳುತ್ತಾರೆ: ''ಮಗೂ, ಈ ಜಗತ್ತನ್ನು ನಿನ್ನದಾಗಿಸಿಕೊ. ನೆನಪಿಡು, ಈ ಜಗತ್ತಿನಲ್ಲಿ ಯಾರೂ ಪರಕೀಯರಲ್ಲ''. ಶ್ರೀರಾಮಕೃಷ್ಣರೆನ್ನುತ್ತಾರೆ: ''ಕಣ್ಣು ಮುಚ್ಚಿ ದೇವರನ್ನು ನೋಡುವುದಕ್ಕಿಂತ ಕಣ್ಣು ತೆರೆದು ದೇವರನ್ನು ನೋಡುವುದೇ ಅಧ್ಯಾತ್ಮ ಸಾಧನೆಯ ಉನ್ನತ ಸ್ತರ''. ಸ್ವಾಮಿ ವಿವೇಕಾನಂದರು ಹೇಳಿದ್ದು ಹೀಗೆ: ''ನಂಬಿಕೆ ಎಂಬ ವಿಚಾರವು ನಮ್ಮನ್ನು ನಾವು ನಂಬುವುದರಿಂದ ಆರಂಭವಾಗುತ್ತದೆ, ತದನಂತರದಲ್ಲಷ್ಟೇ ಇನ್ನಿತರ ವಿಷಯಗಳಲ್ಲಿನ ನಮ್ಮ ನಂಬಿಕೆ-ವಿಶ್ವಾಸಗಳು ಮಾನ್ಯತೆಗೆ ಅರ್ಹವೂ ಯೋಗ್ಯವೂ ಆಗಬಲ್ಲವು''. ಇಂತಹ ಮಾರ್ಗದರ್ಶಿಯಾಗಬಲ್ಲ ಅದ್ಭುತ ನುಡಿಗಳು ಇಂದ್ರಿಯ ಗ್ರಾಹ್ಯವಾದ ಲೌಕಿಕ ಸತ್ಯಗಳಿಗಷ್ಟೇ ಸೀಮಿತವಾಗಿ ಜೋತು ಬಿದ್ದಿದ್ದ ಹಾಗೂ ವೈಜ್ಞಾನಿಕ ಮೌಲ್ಯಗಳನ್ನಷ್ಟೇ ಸಮರ್ಥಿಸುತ್ತಾ ಸಂತೃಪ್ತಿ ಪಡೆಯುತ್ತಿದ್ದ ಮಾನವನನ್ನು ಇಂದ್ರಿಯಾತೀತ ಜಗತ್ತಿನತ್ತ ಮುನ್ನಡೆಯಲು ಪಥದರ್ಶಿ ಆದವು.

ಸನಾತನ ಧರ್ಮವು ಪ್ರತಿಪಾದಿಸುವ ಈ ಮಹಾನ್ ಆದರ್ಶವನ್ನು ಕುರಿತು ವಿಶ್ವವಿಖ್ಯಾತ ಇತಿಹಾಸಜ್ಞ ವಿಲ್‌ಡ್ಯೂರಾಂಟ್, ''...ಜಗತ್ತಿನಲ್ಲಿ ಹಲವಾರು ಕ್ರಾಂತಿಗಳು ಘಟಿಸಿವೆ. ಆದರೆ ಈ ಎಲ್ಲ ಕ್ರಾಂತಿಗಿಂತಲೂ ಹೆಚ್ಚಿನದ್ದನ್ನು ಸಾಧಿಸಿದ ಉತ್ಕೃಷ್ಟ ಕ್ರಾಂತಿ ಯಾವುದೆಂದರೆ, ಮನಸ್ಸನ್ನು ಉನ್ನತ ಸ್ಥಿತಿಯಲ್ಲಿ ಮುನ್ನಡೆಸುವುದು ಹಾಗೂ ನಿರಂತರವಾಗಿ ಚಾರಿತ್ರ್ಯ ಸುಧಾರಣೆಯ ಕುರಿತಾದ ಆಲೋಚನೆಗಳಿಗೆ ಪ್ರೋತ್ಸಾಹ ನೀಡುವುದು. ಆದ್ದರಿಂದಲೇ ತತ್ತ್ವಜ್ಞಾನಿಗಳು ಮತ್ತು ಸಂತರೇ ಜಗತ್ತಿನ ಅತ್ಯಂತ ಶ್ರೇಷ್ಠ ಕ್ರಾಂತಿಪುರುಷರು'' ಎಂದಿದ್ದಾರೆ. ಜಗತ್ತಿಗೆ ಆವಶ್ಯಕವಿರುವುದು ಕ್ರಾಂತಿಗಳಿಗಿಂತ ವಿಕಾಸ ಎಂಬ ವಿವೇಕವಾಣಿಯನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಾ ಸಾಗಿದಂತೆ ಉದ್ಧಾರದ ಸುದೀರ್ಘ ಪಯಣದಲ್ಲಿ ನಾವು ಬದ್ಧರಾಗಲೇಬೇಕಾದ ಮೌಲ್ಯಗಳ ಬಗ್ಗೆ ನಮಗೆ ಮನವರಿಕೆಯಾಗದಿರದು.

**ರಾಮಕೃಷ್ಣ ಮಿಷನ್:** ಮಾನವ ನಾಗರಿಕತೆಯು ಹಾದು ಬಂದ ಹತ್ತಾರು ಏರಿಳಿತಗಳ ಇತಿಹಾಸದ ಪಯಣದಲ್ಲಿ ದಿವ್ಯತ್ರಯರು ಅನುಗ್ರಹಿಸಿದ ನಂಬಿಕೆಗಳಲ್ಲಿನ ಭರವಸೆಗಳು ಮತ್ತು ಭರವಸೆಪೂರ್ವಕ ಪಯಣದಿಂದ ಜೀವನೋತ್ಥಾನದ ಚಿಂತನೆಗಳ ಅಧ್ಯಯನವು ರೋಚಕ ಹಾಗೂ ಮನೋಜ್ಞವೆನಿಸುತ್ತದೆ.

ಜಗನ್ಮಾತೆಯಿಂದ ಲೋಕಶಿಕ್ಷಣಕಾರ್ಯಕ್ಕೆ ನಿಯೋಜಿಸಲ್ಪಟ್ಟ ವಿಶ್ವಗುರು ಸ್ವಾಮಿ ವಿವೇಕಾನಂದರಿಂದ ಸ್ಥಾಪಿತವಾದ ಶ್ರೀರಾಮಕೃಷ್ಣ ಮಠ ಮತ್ತು ಮಿಷನ್ ಇಂದು ತನ್ನ ಆದರ್ಶಪೂರ್ಣ ನಡವಳಿಕೆ ಹಾಗೂ ವಿಶ್ವಾಸಾರ್ಹ ಕಾರ್ಯಶೀಲತೆಯಿಂದ ವಿಶ್ವದಾದ್ಯಂತ ಅಸಂಖ್ಯಾತ ಜನರ ಮನಮುಟ್ಟಿದೆ, ಹೃದಯ ತಟ್ಟಿದೆಯಲ್ಲದೆ ಅವರುಗಳು ಭವಸಾಗರವನ್ನು ಅತಿಕ್ರಮಿಸಿ ಭಾವಸಾಗರವನ್ನು ಪ್ರವೇಶಿಸಲು ಅನುವು ಮಾಡಿಕೊಟ್ಟಿದೆ.

ಸ್ಥಾಪನೆಗೊಂಡಂದಿನಿಂದ ದಿವ್ಯತ್ರಯರ ಧ್ಯೇಯಾದರ್ಶಗಳಿಗೆ ತಲೆಬಾಗಿ ಶ್ರಮಿಸುತ್ತಾ ಸಾಗಿರುವ ಈ ಮಹಾನ್ ಸಂಸ್ಥೆಯು ತ್ಯಾಗೀ ಸಂನ್ಯಾಸಿಗಳನ್ನು ಮುಂದಿರಿಸಿಕೊಂಡು ಸಮಾಜದ ಇನ್ನುಳಿದ ಮೂರೂ ಆಶ್ರಮಗಳ ಜೀವನ ಸಾರ್ಥಕ್ಯಕ್ಕೆ ಅತ್ಯವಶ್ಯಕವಾದ ಮಾರ್ಗದರ್ಶನವನ್ನಿತ್ತು ಮುನ್ನಡೆಸುತ್ತಿದೆ. ''ಸ್ವಾಮಿ ವಿವೇಕಾನಂದರು ಭರತಖಂಡವನ್ನು ಮತ್ತು ನಮ್ಮ ಸನಾತನ ಧರ್ಮವನ್ನು ಸಂರಕ್ಷಿಸಿದರು. ಅವರು ಬಾರದೇ ಇದ್ದಿದ್ದರೆ ನಮಗೆ ಸ್ವಾತಂತ್ರ್ಯ ಬರುತ್ತಿರಲಿಲ್ಲ, ನಮ್ಮ ಧರ್ಮವೂ ಉಳಿಯುತ್ತಿರಲಿಲ್ಲ'' ಎಂದು ಚಕ್ರವರ್ತಿ ಶ್ರೀ ರಾಜಗೋಪಾಲಾಚಾರಿ ಅವರು ನುಡಿದರೆ, ಇತಿಹಾಸಜ್ಞ ಪ್ರೊ. ಎ.ಎಲ್.ಬಷಾಮ್ ಹೇಳುತ್ತಾರೆ: ''ವರ್ಷಗಳು ಕಳೆದಂತೆ ಮತ್ತು ಆಗ ನಡೆದು ಹೋದ ಅನಿರೀಕ್ಷಿತ ಹಾಗೂ ಮಹತ್ತರ ಘಟನೆಗಳು ತಿಳಿಯಪಡಿಸುವುದೇನೆಂದರೆ, ಮುಂಬರುವ ಶತಮಾನಗಳಲ್ಲಿ ಸ್ವಾಮಿ ವಿವೇಕಾನಂದರನ್ನು ಆಧುನಿಕ ಜಗತ್ತಿನ ವಿನ್ಯಾಸಕಾರ ಎಂದು ನೆನಪಿಸುತ್ತವೆ.''

**ಮಿಷನ್ನಿನ ಕಾರ್ಯವೈಖರಿ:** ಕೋಲ್ಕತ್ತಾದ ಬೇಲೂರು ಮಠವನ್ನು ತನ್ನ ಕೇಂದ್ರಸ್ಥಾನವಾಗಿರಿಸಿಕೊಂಡಿರುವ ರಾಮಕೃಷ್ಣ ಮಠ ಮತ್ತು ಮಿಷನ್ ಇಂದು ಜಗತ್ತಿನಾದ್ಯಂತ ನೂರಾರು ಶಾಖೆಗಳನ್ನು ಹೊಂದಿದೆ. ಸಹಸ್ರಾರು ಸಂನ್ಯಾಸಿಗಳು, ಬ್ರಹ್ಮಚಾರಿಗಳು ಮತ್ತು ಅಸಂಖ್ಯಾತ ಭಕ್ತಜನರು ಅಹರ್ನಿಶಿ ಶ್ರಮಿಸುತ್ತಾ ಶ್ರೀರಾಮಕೃಷ್ಣ ಭಾವಧಾರೆಯನ್ನು ಉತ್ಕೃಷ್ಟ ರೀತಿಯಲ್ಲಿ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಭಾರತೀಯ ಸನಾತನ ಪರಂಪರೆಯ ಸಂರಕ್ಷಣೆ ಹಾಗೂ ಯೋಗ್ಯಪಥದಲ್ಲಿ ಅದರ ಮುಂದುವರಿಕೆಗೆ ಸಂಕಲ್ಪತೊಟ್ಟು ಶ್ರಮಿಸುತ್ತಿರುವ ಈ ಮಹಾನ್ ಸಂಸ್ಥೆಯು ಮಾನವೋತ್ಥಾನಕ್ಕೆ ಪೂರಕವಾದ ಎಲ್ಲ ಆಯಾಮಗಳಲ್ಲೂ ಕಾರ್ಯಪ್ರವೃತ್ತವಾಗಿದೆ.

ಮಹಾನ್ ಸಂಸ್ಥೆಯ ಅಡಿಯಲ್ಲಿ ತಮ್ಮ ಧ್ಯೇಯನಿಷ್ಠ ಕಾರ್ಯವೈಖರಿಯಿಂದ ಜಗತ್ತಿಗೆ ಅತ್ಯಮೂಲ್ಯ ಕೊಡುಗೆ ನೀಡುತ್ತಿರುವ ನೂರಾರು ಸಂನ್ಯಾಸಿಗಳು ಇಂದು ಪ್ರಾತಃಸ್ಮರಣೀಯರಾಗಿದ್ದಾರೆ.

### ಕನ್ನಡ ನೆಲದಲ್ಲಿ ಶ್ರೀರಾಮಕೃಷ್ಣ ಭಾವಧಾರೆ

ನಮ್ಮ ಕನ್ನಡನಾಡು ಆಚಾರ್ಯತ್ರಯರ ವಿಶೇಷ ಕೃಪಾಶೀರ್ವಾದಗಳಿಗೆ ಪಾತ್ರವಾದ ಪವಿತ್ರ ತಾಣವಾಗಿದೆ. ಶ್ರೀಮಾತೆ ಶಾರದಾದೇವಿಯವರು ಕನ್ನಡದ ಪವಿತ್ರ ನೆಲವನ್ನು ಮೆಟ್ಟಿ ಈ ನಾಡನ್ನು ಮತ್ತಷ್ಟು ದಿವ್ಯಧಾಮವಾಗಿಸಿದ್ದಾರೆ. ಭಗವಾನ್ ಶ್ರೀರಾಮಕೃಷ್ಣರೇ ಹೇಳಿದಂತೆ ಲೋಕಶಿಕ್ಷಣಕ್ಕಾಗಿ ಜಗನ್ಮಾತೆಯಿಂದ ನಿರ್ದೇಶಿಸಲ್ಪಟ್ಟ ವಿಶ್ವವಂದ್ಯ ಸ್ವಾಮಿ ವಿವೇಕಾನಂದರು ತಮ್ಮ ಪರಿವ್ರಾಜಕ

ದಿನಗಳಲ್ಲಿ ಕನ್ನಡಿಗರ ವಿಶೇಷ ವ್ಯಕ್ತಿತ್ವಕ್ಕೆ ಮಾರುಹೋದರಷ್ಟೇ ಅಲ್ಲದೆ, ಭವಿಷ್ಯದಲ್ಲಿ ಮೈಸೂರು ಸಂಸ್ಥಾನವು ಗುರುದೇವ ಶ್ರೀರಾಮಕೃಷ್ಣ ಕಾರ್ಯಾಂದೋಲನಕ್ಕೆ ವಿಶಿಷ್ಟ ಕ್ಷೇತ್ರವಾಗಲಿದೆ ಎಂದು ಭವಿಷ್ಯ ನುಡಿದಿದ್ದರು.

ಕನ್ನಡದ ನೆಲದಲ್ಲಿ ಬ್ರಹ್ಮಲೀನರಾದ ಪೂಜ್ಯ ಸ್ವಾಮಿ ತ್ಯಾಗೀಶಾನಂದಜಿ, ಸ್ವಾಮಿ ಸಿದ್ಧೇಶ್ವರಾನಂದಜಿ, ಸ್ವಾಮಿ ಯತೀಶ್ವರಾನಂದಜಿ, ಸ್ವಾಮಿ ಶಾಂಭವಾನಂದಜಿ, ಸ್ವಾಮಿ ಆದಿದೇವಾನಂದಜಿ, ಸ್ವಾಮಿ ಸೋಮನಾಥಾನಂದಜೀ, ಸ್ವಾಮಿ ಹರ್ಷಾನಂದಜಿ, ಸ್ವಾಮಿ ಪುರುಷೋತ್ತಮಾನಂದಜೀ, ಸ್ವಾಮಿ ಜಗದಾತ್ಮಾನಂದಜಿ ಮೊದಲಾದ ಸಂತಶ್ರೇಷ್ಠರು ದಿವ್ಯತ್ರಯರ ಭಾವಧಾರೆಗೆ ಅಸಾಧಾರಣ ಕೊಡುಗೆಯಿತ್ತು ಇಂದು ಪ್ರಾತಃಸ್ಮರಣೀಯರಾಗಿದ್ದಾರೆ. ಅಲ್ಲದೆ ಇತ್ತೀಚಿನ ದಶಕಗಳಲ್ಲಿ ಪೂಜ್ಯ ಸ್ವಾಮಿ ಆತ್ಮವಿದಾನಂದಜಿ, ಸ್ವಾಮಿ ಮುಕ್ತಿದಾನಂದಜಿ, ಸ್ವಾಮಿ ನಿರ್ಭಯಾನಂದಜಿ ಮೊದಲಾದವರು ಈ ದಿಶೆಯಲ್ಲಿ ಅತ್ಯಮೂಲ್ಯವಾದ ಕೊಡುಗೆಯನ್ನು ನೀಡಿರುವುದು ಗಮನೀಯ ಸಂಗತಿ. ತಮ್ಮ ತಪೋಮಯ ಜೀವನ, ಅಪೂರ್ವ ಸಾಹಿತ್ಯ ಕೃಷಿ, ಅಸಾಧಾರಣ ಸಂಘಟನಾ ವೈಶಿಷ್ಟ್ಯ, ನಿಷ್ಠಾಪೂರ್ಣ ಶಾಸ್ತ್ರಾಧ್ಯಯನ, ಗಾನ-ಪ್ರವಚನ-ಬರಹಗಳ ಮೂಲಕ ಲೋಕಪಾವನ ಕಾರ್ಯವೆಸಗಿದ್ದಾರಲ್ಲದೆ, ಸ್ವಾಮಿ ವಿವೇಕಾನಂದರ ಭವಿಷ್ಯವಾಣಿಯನ್ನು ಸಾಕಾರಗೊಳಿಸುವಲ್ಲಿ ಅವಿರತವಾಗಿ ಶ್ರಮಿಸುತ್ತಾ ಬಂದ ಮಹಾತ್ಮರಿವರು.

### ಭಾವಧಾರೆಯೆಂಬ ನದಿಗೆ ಉಪನದಿಯಾದ ಸ್ವಾಮಿ ಪುರುಷೋತ್ತಮಾನಂದರು

ಪೂಜ್ಯ ಸ್ವಾಮಿ ಪುರುಷೋತ್ತಮಾನಂದರು ಅವಿಭಜಿತ ಮಂಗಳೂರು ಜಿಲ್ಲೆಯ ಗ್ರಾಮೀಣ ಸೊಗಡಿನವರು. ಎಸ್.ಎಸ್.ಎಲ್.ಸಿ. ಶಿಕ್ಷಣ ಮುಗಿಸಿದ ನಂತರ ಯುವಕ ಶ್ರೀರಾಮಚಂದ್ರರಿಗೆ ಹಿರಿಯರೊಬ್ಬರು 'ಶ್ರೀರಾಮಕೃಷ್ಣ ವಚನವೇದ' ಎಂಬ ಪವಿತ್ರ ಗ್ರಂಥವನ್ನಿತ್ತು ಓದಲು ಹೇಳಿದರು. ಗ್ರಂಥವನ್ನು ಶ್ರದ್ಧೆಯಿಂದ ಓದಿದ್ದಲ್ಲದೆ ಕೊಲ್ಕತ್ತಾ ಪ್ರವಾಸ ಕೈಗೊಂಡು ಬೇಲೂರು ಮಠದಲ್ಲಿ ಭಗವಾನ್ ಶ್ರೀರಾಮಕೃಷ್ಣರ ದಿವ್ಯಧಾಮವನ್ನು ಕಂಡು ಪುಳಕಿತರಾದರು.

ಕಾಲಚಕ್ರ ಉರುಳಿದ್ದೇ ಅರಿವಾಗಲಿಲ್ಲವೋ ಏನೋ! ಬಹಳಷ್ಟು ಆಲೋಚಿಸಿ ತಮ್ಮ ಬದುಕನ್ನು ಭಗವಾನ್ ಶ್ರೀರಾಮಕೃಷ್ಣರಿಗಾಗಿ ಸಮರ್ಪಿಸಿಕೊಳ್ಳಲು ಯುವಕ ಶ್ರೀ ರಾಮಚಂದ್ರರು ನಿರ್ಧರಿಸಿದರು. ರಾಮಕೃಷ್ಣ ಮಿಷನ್‌ಗೆ ಸೇರಬೇಕೆಂದು ಬೆಂಗಳೂರಿನ ಬಸವನಗುಡಿಯ ಆಶ್ರಮದ ಹೊಸ್ತಿಲಿಗೆ ಬಂದಾಗ ಅವರಿಗೆ ಅದಾಗಲೇ ಇಪ್ಪತ್ತೊಂಭತ್ತು ವರ್ಷ ವಯಸ್ಸಾಗಿತ್ತು!

ಮಹಾತಪಸ್ವಿಗಳೆಂದೇ ಖ್ಯಾತರಾಗಿದ್ದ ಪರಮಪೂಜ್ಯ ಸ್ವಾಮಿ ಯತೀಶ್ವರಾನಂದರು ಯುವಕ ರಾಮಚಂದ್ರನನ್ನು ಪ್ರೀತಿ ವಿಶ್ವಾಸದಿಂದ ಮಾತನಾಡಿಸಿ, ಆತನ ಇಚ್ಛೆಯನ್ನಾಲಿಸಿ ಸಂತುಷ್ಟರಾದರೂ ಅದಾಗಲೇ ಇಪ್ಪತ್ತೊಂಭತ್ತು ವರ್ಷ ವಯಸ್ಸಾದ್ದರಿಂದ ಸಂಸ್ಥೆಗೆ ಸೇರ್ಪಡೆಗೊಳ್ಳಲು ಕಠಿಣ ನಿಯಮಗಳು ಅನುಮತಿಸುತ್ತಿರಲಿಲ್ಲ! ಈ ತರುಣನ ಸತ್ವವನ್ನರಿತ ಪೂಜ್ಯರು ಬೇಲೂರು ಮಠದ ಮುಖ್ಯಸ್ಥರಿಗೆ ಪತ್ರಿಸುತ್ತಾ, ''...ನಿಯಮವನ್ನು ಬದಿಗಿತ್ತು ಈ ಯುವಕನನ್ನು ಸಂಸ್ಥೆಗೆ ಸೇರಿಸಿಕೊಂಡರೆ ಭವಿಷ್ಯದಲ್ಲಿ ನಮ್ಮ ಮಹಾಸಂಘಕ್ಕೆ ಗುರುತರ ಆಸ್ತಿಯಾಗುತ್ತಾನೆ'' ಎಂದು ದೃಢ ಮನಸ್ಸಿನಿಂದ ಉಲ್ಲೇಖಿಸಿದ್ದರಂತೆ! ಮಹಾನ್ ಯೋಗಿಯ ದೃಷ್ಟಿ ಆ ಯುವಕನ ಮೇಲೆ ನೆಟ್ಟಿತ್ತು! ವಯೋನಿಯಮದ ಪರದೆ ಪಕ್ಕಕ್ಕೆ ಸರಿಯಿತು! ದಿವ್ಯತ್ರಯರ ಕೃಪಾಹಸ್ತವು ಯುವಕ ರಾಮಚಂದ್ರನ ಮಸ್ತಕದ ಮೇಲಿತ್ತು!!

### ಅಪೂರ್ವ ಸಂತ

ಪೂಜ್ಯರು ಗ್ರಾಮೀಣ ಹಿನ್ನೆಲೆಯವರು, ಬಡತನದ ಕುಟುಂಬದಿಂದ ಬಂದವರು. ಆದರೆ ಸ್ವಪ್ರಯತ್ನ, ಆತ್ಮವಿಶ್ವಾಸ ಹಾಗೂ ಆತ್ಮಾವಲಂಬನೆಗೆ ಒತ್ತುಕೊಟ್ಟು ಬದುಕನ್ನು ಕಟ್ಟಿಕೊಂಡವರು. ಪೂಜ್ಯರ ಮನೋಪ್ರಪಂಚವು ಹಲವಾರು ವಿಷಯಗಳನ್ನು ಮತ್ತೆ ಮತ್ತೆ ಮೆಲುಕುಹಾಕಲು ಪ್ರೇರೇಪಿಸುತ್ತಿತ್ತು. ಅವುಗಳೆಂದರೆ, ಜೀವನವನ್ನು ರೂಪಿಸದ ವಿದ್ಯಾಭ್ಯಾಸ ಜೀವವನ್ನೇ ತೆಗೆದುಬಿಡುತ್ತದೆ, ಜಗತ್ತಿನಲ್ಲಿ ಘಟಿಸುವ ಎಲ್ಲಾ ಅಪರಾಧಗಳಿಗೂ ಬಡತನ-ಶ್ರೀಮಂತಿಕೆಗಳೆಂಬ ಕಾರಣಗಳು ಹೊರನೋಟಕ್ಕೆ ಗೋಚರಿಸಿದರೂ ಆತ್ಮಗೌರವದ ಕೊರತೆಯೇ ಪ್ರಧಾನ ಕಾರಣ. ಶಾಲಾಶಿಕ್ಷಣವು ವಿದ್ಯಾಭ್ಯಾಸವೆಂಬ ವಿಕಸಿತ ಕುಸುಮದ ಒಂದು ದಳ ಅಷ್ಟೇ! ಜೀವನ ಶಿಕ್ಷಣವು ಸುದೀರ್ಘ ಹೋರಾಟದಿಂದಷ್ಟೇ ಲಭ್ಯವಾಗುವಂಥದ್ದು. ವ್ಯಕ್ತಿತ್ವದಲ್ಲಿ ಆತ್ಮಗೌರವದ ಪ್ರಜ್ಞೆ ವೃದ್ಧಿಸಿದಾಗಷ್ಟೇ ವ್ಯಕ್ತಿಯು ಮಾನಗೇಡಿ ಕಾರ್ಯಗಳಿಂದ ದೂರ ಸರಿಯುತ್ತಾನೆ.

ಪವಿತ್ರಾತ್ಮರ ಮಾರ್ಗದರ್ಶನ, ಸದ್ಗ್ರಂಥಗಳ ಅಧ್ಯಯನ ಮತ್ತು ಸದಾಕಾಲ ಆತ್ಮವಿಶ್ಲೇಷಣಾಪೂರ್ವಕ ಜಾಗೃತ ಜೀವನವು ಯುವಕ ರಾಮಚಂದ್ರರನ್ನು ಆಧ್ಯಾತ್ಮಿಕ ಸಾಧನಾ ಪಯಣದಲ್ಲಿ ದೃಢಮನಸ್ಸಿನಿಂದ ಸಾಗುವಂತೆ ಪ್ರೇರೇಪಿಸಿತು. ಶ್ರೇಷ್ಠ ಜೀವನವೆಂಬುದು ಸವಾಲುಗಳಿಗೆ ಮತ್ತು ಹೋರಾಟಗಳಿಗೆ ಒಲಿಯುವಂಥದ್ದು ಎಂಬ ಸತ್ಯ ಮನವರಿಕೆಯಾಯಿತು. ಹಲವು ವರ್ಷಗಳ ಹೋರಾಟದ ಜೀವನವು ಪೂಜ್ಯರಲ್ಲಿ ಅದಾಗಲೇ ಅಡಗಿದ್ದ ಮಹಾತ್ಮನನ್ನು ಹೊರಗೆಡವಿತು!

### ಪೂಜ್ಯರ ಅಪೂರ್ವ ವ್ಯಕ್ತಿತ್ವ

ಪೂಜ್ಯರು ಅನನ್ಯ ಗಾಯಕರಾಗಿದ್ದರು. ನೂರಾರು ಹಾಡುಗಳಿಗೆ ರಾಗಸಂಯೋಜನೆ ಮಾಡಿ ಅತ್ಯಂತ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಸ್ವತಃ ಪೂಜ್ಯರೇ ಹತ್ತಾರು ಹಾಡುಗಳನ್ನು ರಚಿಸಿದ್ದರು. ಅವರ ದೇವದುರ್ಲಭ ಕಂಠಕ್ಕೆ ಮಾರುಹೋಗದವರಿಲ್ಲ. ಎಲ್ಲ ಭಾಷೆಗಳಲ್ಲಿನ ಹಾಡುಗಳನ್ನು ಮನೋಜ್ಞವಾಗಿ ಹಾಡುವುದಲ್ಲದೆ ಕಬೀರರ ದೋಹೆಗಳನ್ನು ಕನ್ನಡ ಭಾಷೆಗೆ ಭಾವಕ್ಕೆ ಚ್ಯುತಿಯಾಗದಂತೆ ಭಾಷಾಂತರಿಸಿ ನೂರಾರು ವೇದಿಕೆಗಳಲ್ಲಿ ಸುಶ್ರಾವ್ಯವಾಗಿ ಹಾಡಿದ ಖ್ಯಾತಿ ಅವರದ್ದು. ಸುಪ್ರಸಿದ್ಧ ಕವಿಗಳಾದ ಕುವೆಂಪು, ಜಿ.ಎಸ್.ಶಿವರುದ್ರಪ್ಪ, ದ.ರಾ.ಬೇಂದ್ರೆ, ಪ್ರಭುಶಂಕರ ಮೊದಲಾದವರ ರಚನೆಗಳಿಗೆ ತಮ್ಮ ಸುಮಧುರ ಗಾಯನದ ಮೂಲಕ ಜೀವಂತಿಕೆಯನ್ನಿತ್ತ ಮಹಾತ್ಮರಿವರು. ಶ್ರೀರಾಮಕೃಷ್ಣರ ಸಾಹಿತ್ಯಕ್ಕೆ ಕುವೆಂಪುರವರ ಕೊಡುಗೆ ಹಾಗೂ ಭಗವತ್ಪಾದರ ಭಕ್ತಿಸುಧೆ ಮೊದಲಾದ ಗಾನ-ಪ್ರವಚನಗಳ ಮೂಲಕವೂ ಪೂಜ್ಯರು ಅಸಂಖ್ಯಾತ

ಚಿಂತಕರ ಹಾಗೂ ಸಾಧಕರ ಹೃನ್ಮಂದಿರವನ್ನು ಪ್ರವೇಶಿಸಿದ್ದಾರೆ. ಪೂಜ್ಯರು ರಾಗಸಂಯೋಜನೆ ಮಾಡಿ ಹಾಡಿದ ಸ್ವಾಮಿ ವಿವೇಕಾನಂದರಿಂದ ರಚಿತವಾದ '**ಸಂನ್ಯಾಸಿಗೀತೆ**'ಯು ಸಹಸ್ರಾರು ವೇದಿಕೆಗಳಲ್ಲಿ ಮೊಳಗಿರುವುದೊಂದು ದಾಖಲೆ.

ಪೂಜ್ಯರ ಅಪೂರ್ವ ಗಾಯನ, ಉಪನ್ಯಾಸದ ವೈಖರಿ ಹಾಗೂ ಬರವಣಿಗೆಯಲ್ಲಿನ ಜೀವಂತಿಕೆಗಳು ಅವರ ವ್ಯಕ್ತಿತ್ವದ ವಿಶೇಷ ಆಯಾಮಗಳು.

### ಪೂಜ್ಯರ ಸೇವಾಕಾರ್ಯಗಳು

ದಿವ್ಯತ್ರಯರ ಭಾವಧಾರೆಯನ್ನು ಯೋಗ್ಯರೀತಿಯಲ್ಲಿ ಸಮಾಜಕ್ಕೆ ತಲುಪಿಸುವ ಯಜ್ಞದಲ್ಲಿ ಪೂಜ್ಯರು ರೂಪಿಸಿದ್ದ ಹಲವಾರು ಆಯಾಮಗಳು ಸಾಧಕರಿಗೆ ಪ್ರೇರಣಾದಾಯಕವಾದ ದಾರಿದೀಪವೆನಿಸಿವೆ. ಅವುಗಳನ್ನು ಸಂಕ್ಷಿಪ್ತವಾಗಿ ಗಮನಿಸೋಣ.

## ೧. ವಿದ್ಯಾರ್ಥಿದೇವೋ ಭವ

ವಿದ್ಯಾರ್ಥಿದೆಸೆಯಲ್ಲಿ ಸಾಮಾನ್ಯ ವ್ಯಕ್ತಿಯಾಗಿದ್ದ ಪೂಜ್ಯರಿಗೆ ಸಮಾಜದ ಜನಸಾಮಾನ್ಯರ ಬದುಕಿನ ಕಷ್ಟಕಾರ್ಪಣ್ಯಗಳ ಅರಿವಿತ್ತು. ಆದ್ದರಿಂದ ಜನಸಾಮಾನ್ಯರ ಬಗ್ಗೆ ಅವರ ಕಾಳಜಿಯು ಅಧಿಕವಾಗಿತ್ತು. ತಮ್ಮ ಬಳಿಗೆ ಬಂದ ನಿಕೃಷ್ಟ, ಬಡವ, ದಡ್ಡ, ನಿಷ್ಪ್ರಯೋಜಕರೆನಿಸಿದ್ದ, ವಿಕಲಚೇತನರನ್ನೂ ಒಳಗೊಂಡಂತೆ, ಎಲ್ಲರನ್ನೂ ಪ್ರೀತಿಯಿಂದ ಆದರಿಸಿ ಯೋಗ್ಯರೀತಿಯಲ್ಲಿ ಮುನ್ನಡೆಸಿದ್ದಾರೆ.

ಯುವಜನತೆಯನ್ನು ಮುನ್ನಡೆಸುವ ಕಾರ್ಯದಲ್ಲಿ ವಿಶೇಷ ಶ್ರಮ ವಹಿಸುತ್ತಿದ್ದ ಪೂಜ್ಯರ ಒಂದು ಮಾತು ಇಲ್ಲಿ ಉಲ್ಲೇಖಾರ್ಹ. ಬೆಲ್ಲದ ಕಟ್ಟೆಯನ್ನು ಕಟ್ಟಿದ್ದರೂ, ಬೇವಿನ ಮರವು ಎಂದೆಂದಿಗೂ ಬೇವಿನ ಮರವಾಗಿಯೇ ಉಳಿಯುವುದು ನಿಜ! ಅಲ್ಲಿ ಪರಿವರ್ತನೆಯ ಮಾತೇ ಇಲ್ಲ! ಆದರೆ ಮಾನವನ ವಿಷಯ ಹಾಗಲ್ಲ. ಸತ್ಸಂಗದಿಂದ, ಸೂಕ್ತವಾದ ಮಾರ್ಗದರ್ಶನ-ನಿರ್ದೇಶನಗಳಿಂದ ಪಾಪಿಗಳೂ ಕೂಡ ಪುಣ್ಯಾತ್ಮರಾಗಬಲ್ಲರು! ಇದೊಂದು ವಿಶೇಷ ಸೌಭಾಗ್ಯವೇ ಸರಿ. ಪೂಜ್ಯರ ಕಾರ್ಯಪ್ರಣಾಳಿಕೆಯಲ್ಲಿ ಸ್ವಾಮಿ ವಿವೇಕಾನಂದರ, 'If you say every saint had a past, then every sinner must have a future' ಎಂಬ ದಿವ್ಯ ಸಂದೇಶವು ಪ್ರತಿಧ್ವನಿತವಾಗಿತ್ತು. ವಿದ್ಯಾರ್ಥಿಗಳ ಅತ್ಯಮೂಲ್ಯ ಜೀವನವು, ದುಡ್ಡಿನ ಆಸೆಗೆ ಬೆಲ್ಲ ಮಾರಿ ಗೋಣಿಚೀಲ ನೆಕ್ಕಿದ ಎಂದಾಗಬಾರದು ಎಂದವರು ಎಚ್ಚರಿಸುತ್ತಿದ್ದರು. ಅವರವರ ಭವಿಷ್ಯದ ಶಿಲ್ಪಿ ಅವರವರೇ ಎಂಬ ಮಾತು ನಿಜವಾದರೂ ವಿದ್ಯಾರ್ಥಿಗಳ ಹಾಗೂ ಯುವಜನತೆಯ ವ್ಯಕ್ತಿತ್ವವನ್ನು ಯೋಗ್ಯವಾಗಿ ರೂಪಿಸುವ ಕಾರ್ಯದಲ್ಲಿ ಹಿರಿಯರೇ ಶಿಲ್ಪಿಗಳಾದ್ದರಿಂದ ಅವರ ಪಾತ್ರ ಹಿರಿದಾದದ್ದು ಎಂದು ಹೇಳುತ್ತಾ ಸಮಾಜದ ಮಾತಾಪಿತೃಗಳನ್ನು ಹಾಗೂ ಗುರುಹಿರಿಯರನ್ನು ಸದಾ ಎಚ್ಚರಿಸಿ ಅವರುಗಳಿಗೆ ಕರ್ತವ್ಯವನ್ನು ಮನವರಿಕೆ ಮಾಡಿಕೊಡುತ್ತಿದ್ದರು.

### ವಿವೇಕಾನಂದ ಬಾಲಕ ಸಂಘ ಮತ್ತು ಯುವಕ ಸಂಘ

ಪೂಜ್ಯರು ಬೆಂಗಳೂರಿನ ರಾಮಕೃಷ್ಣ ಮಠದಲ್ಲಿ ಸರಿಸುಮಾರು ಮೂರು ದಶಕಗಳ ಕಾಲ ಬಾಲಕ ಸಂಘ ಮತ್ತು ಯುವಕ ಸಂಘಗಳಿಗೆ ಮಾರ್ಗದರ್ಶಕರಾಗಿದ್ದರು. ಪ್ರತಿ ಭಾನುವಾರದಂದು ಸ್ವತಃ ತಾವೇ ಶಕ್ತಿಶಾಲೀ ವ್ಯಕ್ತಿತ್ವ ನಿರ್ಮಾಣದ ತರಗತಿಗಳನ್ನು ನಡೆಸುತ್ತಿದ್ದರು. ಸಂಘವೇ ಶಕ್ತಿ (Faculty of organization)ಯ ಬಗ್ಗೆ ಅಚಲವಾದ ವಿಶ್ವಾಸ ಹೊಂದಿದ್ದ ಪೂಜ್ಯರು ಸಂಘದ ಪ್ರತಿಯೊಬ್ಬ ಸದಸ್ಯರ ಬಗ್ಗೆಯೂ ವೈಯಕ್ತಿಕ ಆಸಕ್ತಿ-ಕಾಳಜಿಯನ್ನಿತ್ತು ಮುನ್ನಡೆಸುತ್ತಿದ್ದರು.

### ವಿದ್ಯಾರ್ಥಿಗಳಿಗಾಗಿಯೇ ವಿಶೇಷ ಪುಸ್ತಕಗಳು

ಸೋಮಶೇಖರ ಎಂಬ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರೌಢಶಾಲಾ ವಿದ್ಯಾರ್ಥಿಯು ತನ್ನ ಅಧ್ಯಯನದಲ್ಲಿ ಎದುರಾಗಿರುವ ತೊಡಕುಗಳ ನಿವಾರಣೆ ಹಾಗೂ ಅಧ್ಯಯನದ ಯಶಸ್ಸಿಗೆ ಸೂಕ್ತ ಮಾರ್ಗದರ್ಶನ ನೀಡಬೇಕೆಂದು ಪತ್ರಮುಖೇನ ವಿನಂತಿಸಿದಾಗ, ಪೂಜ್ಯರು ಪತ್ರಿಸಿದರಲ್ಲದೆ ಸಹಸ್ರಾರು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವುದೆಂದರಿತು ವಿದ್ಯಾರ್ಥಿ ಜೀವನದ ಯೋಗ್ಯ ನಿರ್ವಹಣೆಗೆ ಅತ್ಯವಶ್ಯಕವಾದ ಈ ಮಾರ್ಗದರ್ಶನದ ಮಾಹಿತಿಯನ್ನು '**ವಿದ್ಯಾರ್ಥಿಗಾಗಿ**' ಎಂಬ ಪುಸ್ತಕದ ರೂಪದಲ್ಲಿ ಪ್ರಕಟಿಸಿದರು. ಈ ಪುಸ್ತಕದ ಅಂದಿನ ಪ್ರಪ್ರಥಮ ಪ್ರಕಟಣೆಯ ಭಾಗ್ಯವು ತುಮಕೂರು ಜಿಲ್ಲೆಯ ಕುಣಿಗಲ್‌ನ ವಿವೇಕಾನಂದ ವಿಚಾರ ವೇದಿಕೆಯದ್ದಾಗಿತ್ತೆಂದು ತಿಳಿಸಲು ಹರ್ಷವೆನಿಸುತ್ತದೆ.

ಪೂಜ್ಯರು ವಿದ್ಯಾರ್ಥಿಗಳು ಹಾಗೂ ಯುವಜನತೆಗಾಗಿಯೇ ಐವತ್ತಕ್ಕೂ ಹೆಚ್ಚಿನ ಪುಸ್ತಕಗಳನ್ನು ಬರೆದು ಪ್ರಕಟಿಸಿದರು. ಅವುಗಳಲ್ಲಿ 'ಶಕ್ತಿಶಾಲೀ ವ್ಯಕ್ತಿತ್ವ ನಿರ್ಮಾಣ', 'ಪ್ರಯತ್ನವೇ ಪರಮೇಶ್ವರ', 'ಯುವಶಕ್ತಿಯ ರಹಸ್ಯ', 'ಆಲೋಚನೆ-ಪ್ರಚೋದನೆ', 'ಸದ್ಯಕ್ಕಿಷ್ಟು ಸಾಕು' (ಕನ್ನಡ-ಕನ್ನಡ ನಿಘಂಟು) ಮೊದಲಾದವು ಅತ್ಯಂತ ಪ್ರಮುಖವಾದವು.

'ಯಶಸ್ಸಿನ ರಹಸ್ಯ' ಎಂಬ ಶೀರ್ಷಿಕೆಯಲ್ಲಿ ಪೂಜ್ಯರು ಬರೆದಿರುವ ಐದಾರು ಪುಟ್ಟ ಪುಸ್ತಕಗಳ ಸಂಗ್ರಹವನ್ನು ಪೂಜ್ಯ ಸ್ವಾಮಿ ಮುಕ್ತಿದಾನಂದಜಿಯವರು, ಹಾಗೂ 'Student Treasure' ಎಂಬ ಶೀರ್ಷಿಕೆಯ ಗ್ರಂಥವನ್ನು ಪೂಜ್ಯ ಸ್ವಾಮಿ ಗೌತಮಾನಂದಜಿಯವರು ಪ್ರಕಟಿಸಿ ಮಹದುಪಕಾರ ಮಾಡಿದ್ದಾರೆ.

### ಯುವ ಸಮ್ಮೇಳನ ಮತ್ತು ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಗಳು

ಪೂಜ್ಯರ ಮಾರ್ಗದರ್ಶನದಲ್ಲಿ ರಾಜ್ಯದ ಉದ್ದಗಲಕ್ಕೂ ನೂರಾರು ಯುವ ಸಮ್ಮೇಳನಗಳು, ನೈತಿಕ ಶಿಕ್ಷಣ ಕಾರ್ಯಾಗಾರಗಳು ಆಯೋಜನೆಗೊಂಡವು. ಅತ್ಯುತ್ತಮವಾದ ಉಪನ್ಯಾಸಗಳು ಹಾಗೂ ಪ್ರಶ್ನೋತ್ತರ ಕಾರ್ಯಕ್ರಮಗಳ ಮೂಲಕ ಸಹಸ್ರಾರು ಯುವಕರಿಗೆ ಬದುಕಿನಲ್ಲಿ ಭರವಸೆ-ಮಾರ್ಗದರ್ಶನಗಳು ದೊರೆತವು.

'ವಿದ್ಯಾರ್ಥಿಗಾಗಿ' ಮತ್ತು 'ಶಕ್ತಿಶಾಲೀ ವ್ಯಕ್ತಿತ್ವ ನಿರ್ಮಾಣ' ಮುಂತಾದ ಪುಸ್ತಕಗಳನ್ನಾಧರಿಸಿ ರಾಜ್ಯಮಟ್ಟದಲ್ಲಿ ಪ್ರೌಢಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಗಳನ್ನು ನಡೆಸಿ, ಪ್ರತಿಭಾನ್ವಿತರಿಗೆ ನಗದು ಬಹುಮಾನ ಹಾಗೂ ಭಾಗವಹಿಸಿದವರೆಲ್ಲರಿಗೂ ಅಭಿನಂದನಾ ಪತ್ರ ನೀಡಲು ಪೂಜ್ಯರು ಅನುವು ಮಾಡಿಕೊಟ್ಟರು. ಸುಮಾರು ಒಂದೂವರೆ ದಶಕದ ಕಾಲ ಈ ಪರೀಕ್ಷೆ

ಗಳು ಯಶಸ್ವಿಯಾಗಿ ನೆರವೇರಿ ಲಕ್ಷಾಂತರ ಮಕ್ಕಳ ಬದುಕಿಗೆ ದಾರಿ ದೀವಿಗೆಯಾಯಿತು.

### ವಿವೇಕಾನಂದ ವಿದ್ಯಾರ್ಥಿ ವೇತನ

ಪೂಜ್ಯರು ಬಡವಿದ್ಯಾರ್ಥಿಗಳು ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ಶಿಕ್ಷಣದಿಂದ ವಂಚಿತರಾಗಬಾರದೆಂದರಿತು ಸಂಕಷ್ಟಕ್ಕೆ ಎದುರಾದ ನೂರಾರು ವಿದ್ಯಾರ್ಥಿಗಳಿಗೆ ಪ್ರತಿವರ್ಷವೂ ವಿದ್ಯಾರ್ಥಿ ವೇತನವನ್ನಿತ್ತು ಬೆಂಬಲಿಸಿದರು. ಪೂಜ್ಯರ ನಿರ್ದೇಶನದಂತೆ, ಅವರ ನಿರ್ಯಾಣದ ನಂತರವೂ, ರಾಜ್ಯದ ಉದ್ದಗಲಕ್ಕೂ ಇಂದಿಗೂ ನೂರಾರು ಅರ್ಹ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಪಡೆದು ತಮ್ಮ ಶಿಕ್ಷಣವನ್ನು ನಿರಾತಂಕವಾಗಿ ಮುಂದುವರೆಸುತ್ತಿದ್ದಾರೆ.

## ೨. ಆಚಾರ್ಯದೇವೋ ಭವ

ಪೂಜ್ಯರು ಶಿಕ್ಷಕ ವೃಂದವನ್ನು ಪರಮ ಆದರದಿಂದ ಕಂಡು, ಶೈಕ್ಷಣಿಕ ಸಮ್ಮೇಳನ ಹಾಗೂ ಕಾರ್ಯಾಗಾರಗಳನ್ನೇರ್ಪಡಿಸಿ, ಸೂಕ್ತ ಮಾರ್ಗದರ್ಶನ ನೀಡುತ್ತಿದ್ದರು. ರಾಜ್ಯದ ಸಹಸ್ರಾರು ಶಿಕ್ಷಕರು ಪೂಜ್ಯರ Good Booksನಲ್ಲಿ ಸ್ಥಾನ ಪಡೆದಿದ್ದರು.

ವಿಶೇಷವಾಗಿ ಶಿಕ್ಷಕರನ್ನೇ ಗಮನದಲ್ಲಿರಿಸಿಕೊಂಡು ಪೂಜ್ಯರು ಶಿಷ್ಯ ಅದ್ಭುತ-ಗುರು ಪರಮಾದ್ಭುತ, ಸಮರ್ಥ ಶಿಕ್ಷಕ-ರಾಷ್ಟ್ರರಕ್ಷಕ, ವಿದ್ಯೆಯ ವೈಭವ, ಶತ್ರುಗಳಲ್ಲ, ಶಕ್ತಿಗಳು, ನನ್ನ ಭಾರತ-ತೀರ್ಥಕ್ಷೇತ್ರ ಇವೇ ಮೊದಲಾದ ಉತ್ತಮ ಪುಸ್ತಕಗಳನ್ನು ರಚಿಸಿ ಪ್ರಕಟಿಸಿದರು. ಉತ್ತಮ ಪುಸ್ತಕಗಳನ್ನು ಶಿಕ್ಷಕರಿಗೆ ಉಡುಗೊರೆಯಾಗಿ ನೀಡಿ ಅಧ್ಯಯನಕ್ಕೆ ಪ್ರೇರಣೆ ನೀಡುವುದು ಪೂಜ್ಯರ ವಿಶೇಷ ಸ್ವಭಾವವೇ ಆಗಿತ್ತು. ಅಲ್ಲದೆ ಕೆಲವು ಪುಸ್ತಕಗಳನ್ನಾಧರಿಸಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನೆರವೇರಿಸಿ ಪ್ರಶಸ್ತಿ ಪತ್ರದೊಂದಿಗೆ ವಿಶೇಷ ಬಹುಮಾನಗಳನ್ನಿತ್ತು ಗೌರವಿಸುತ್ತಿದ್ದರು.

ಯೋಗ್ಯ ಶಿಕ್ಷಕರನ್ನು ಸರ್ವರೀತಿಯಿಂದ ಪ್ರೋತ್ಸಾಹಿಸುವ ಸದಾಶಯದೊಂದಿಗೆ ರಾಜ್ಯದ ಹಲವೆಡೆ ಸ್ವಾಮಿ ವಿವೇಕಾನಂದ ಧ್ಯೇಯನಿಷ್ಠ ಶಿಕ್ಷಕ ಸಂಘದ ಸ್ಥಾಪನೆಗೆ ಪೂಜ್ಯರು ಮೂಲ ಪ್ರೇರಣೆಯಾದರು. ಶಿಕ್ಷಕರು ಅಧ್ಯಯನಶೀಲರಾಗಬೇಕು, ಕಲಿಯಲು ಆಸಕ್ತಿ ಉಳ್ಳವರೇ ಕಲಿಸಲು ಯೋಗ್ಯರು, ಉತ್ತಮ ಶಿಕ್ಷಕರಷ್ಟೇ ಉತ್ತಮ ಪ್ರಜೆಗಳನ್ನು ನಿರ್ಮಾಣ ಮಾಡಬಲ್ಲರು, ವಿದ್ಯೆಯ ಕಲಿಸಲು ಪುಸ್ತಕ ಜ್ಞಾನವಷ್ಟೇ ಸಾಕು; ಆದರೆ ಶೀಲವನ್ನು ಕಲಿಸಲು ಶೀಲವಂತನೇ ಬೇಕು, ನಮಗೆ ಯಾವ ಬಗೆಯ ರಾಷ್ಟ್ರ ಬೇಕೋ ಆ ಬಗೆಯ ರಾಷ್ಟ್ರವನ್ನು ನಿರ್ಮಿಸಿಕೊಳ್ಳಲು ಇರುವ ಶ್ರೇಷ್ಠ ಉಪಾಯವೆಂದರೆ ಶಾಲಾ ಕಾಲೇಜುಗಳನ್ನು ರಾಷ್ಟ್ರದ ಆದರ್ಶಕ್ಕೆ ತಕ್ಕಂತೆ ರೂಪಿಸುವುದು ಮುಂತಾದ ಪೂಜ್ಯರ ನುಡಿಮುತ್ತುಗಳು ನಿತ್ಯ ನೂತನವಾಗಿವೆ. ಪೂಜ್ಯರ ವಿಶೇಷ ಕಾರ್ಯವೈಖರಿಯನ್ನು ಗಮನಿಸಿದ್ದ ಖ್ಯಾತ ಶಿಕ್ಷಣತಜ್ಞರಾದ ಡಾ. ಡಿ.ಎಂ. ನಂಜುಂಡಪ್ಪನವರು ನಮ್ಮ ವಿಶ್ವವಿದ್ಯಾಲಯಗಳು ಯೋಗ್ಯತಾಪತ್ರವನ್ನಷ್ಟೇ ನೀಡುವುದರಲ್ಲಿ ಸಂಭ್ರಮಿಸುತ್ತಿವೆ; ಶ್ರೀರಾಮಕೃಷ್ಣಾಶ್ರಮಗಳು ಅನೌಪಚಾರಿಕ ವಿಶ್ವವಿದ್ಯಾಲಯಗಳಾಗಿ ಶ್ರಮಿಸುತ್ತಾ ಜನರಿಗೆ ಯೋಗ್ಯತೆಯನ್ನು ನೀಡುತ್ತಿವೆ ಎಂದು ವಿನೀತರಾಗಿ ಆದರೆ ಗಂಭೀರವಾಗಿ ನುಡಿದಿದ್ದರು.

## ೩. ದೀನದೇವೋ ಭವ

ಹಸಿದ ಹೊಟ್ಟೆಗೆ ಅನ್ನ ನೀಡದ, ವಿಧವೆಯ ಕಣ್ಣೀರನ್ನು ಒರೆಸದ ದೇವರಲ್ಲಾಗಲಿ, ಧರ್ಮದಲ್ಲಾಗಲಿ ನನಗೆ ನಂಬಿಕೆ ಇಲ್ಲ ಎಂಬ ಸ್ವಾಮಿ ವಿವೇಕಾನಂದರ ಸಂದೇಶಕ್ಕೆ ತಲೆಬಾಗಿ ರಾಜ್ಯದ ಇತಿಹಾಸದಲ್ಲಿ ಜೀವಂತ ದುರ್ಗಾಪೂಜೆ ಎಂಬ ವಿಶಿಷ್ಟ ಕಾರ್ಯ ಕ್ರಮವನ್ನು ಪೂಜ್ಯರು ರೂಪಿಸಿದರು. ಅಲ್ಲದೆ, ಆಧುನಿಕ ಶಿಕ್ಷಿತರ ಕುರಿತಾಗಿ ಸ್ವಾಮಿ ವಿವೇಕಾನಂದರು ಗಂಭೀರವಾಗಿ ಪ್ರತಿಪಾದಿಸಿದ್ದ, ''ಬಡವನಿಗೆ ಬೆಳಕು ಕೊಡಿ, ಶ್ರೀಮಂತನಿಗೆ ಹೆಚ್ಚು ಬೆಳಕು ಕೊಡಿ; ಅನಕ್ಷರಸ್ಥರಿಗೆ ಬೆಳಕು ಕೊಡಿ, ಅಕ್ಷರಸ್ಥನಿಗೆ ಹೆಚ್ಚು ಬೆಳಕು ಕೊಡಿ... ಸೇವೆ ಮಾಡುವವರು ಸೇವೆ ಪಡೆಯುವವರಿಗೆ ಕೃತಜ್ಞರಾಗಿರಬೇಕು'' ಎಂಬ ಎಚ್ಚರಿಕೆಯ ಮಾತು ಸಮಾಜಕ್ಕೆ ವಿವೇಕದ ಪಾಠ ಕಲಿಸಬಹುದೆಂಬ ಆಶಯದೊಂದಿಗೆ ಪೂಜ್ಯ ಸ್ವಾಮೀಜಿಯವರು ಈ ಯೋಜನೆಯನ್ನು ಕೈಗೆತ್ತಿಕೊಂಡರು.

ಜೀವಂತ ದುರ್ಗಾಪೂಜೆ ಕಾರ್ಯಕ್ರಮದ ಅಡಿಯಲ್ಲಿ ಶ್ರೀಮಾತೆ ಶಾರದಾದೇವಿಯವರ ಜನ್ಮದಿನದಂದು ನಗರದ ಕೊಳೆಗೇರಿಗಳಲ್ಲಿ ವಾಸಿಸುವ, ರಸ್ತೆಗಳಲ್ಲಿ ಭಿಕ್ಷೆ ಬೇಡುವ ದೀನ, ದಲಿತ ಮತ್ತು ಅಶಕ್ತ ತಾಯಂದಿರನ್ನು ವೇದಘೋಷ ಪೂರ್ಣಕುಂಭದೊಂದಿಗೆ ಆಶ್ರಮಕ್ಕೆ ಆಹ್ವಾನಿಸಿ, ವೇದಿಕೆಯಲ್ಲಿ ಗೌರವಪೂರ್ವಕವಾಗಿ ಕುಳ್ಳಿರಿಸಿ, ಶ್ರೀ ಲಲಿತಾಸಹಸ್ರನಾಮ ಸ್ತೋತ್ರ ಪಠಣಗೈಯ್ಯುತ್ತಾ ಅವರುಗಳನ್ನು ಸಾಕ್ಷಾತ್ ಶ್ರೀ ಶಾರದಾಮಾತೆ ಎಂದೇ ವಿಧ್ಯುಕ್ತವಾಗಿ ಪೂಜಿಸಿ, ಅನ್ನದಾನ-ಧಾನ್ಯದಾನ-ವಸ್ತ್ರದಾನಗಳೊಂದಿಗೆ ಗೌರವಿಸಿ, ಆರೋಗ್ಯ ತಪಾಸಣೆಗೈದು ಉಚಿತವಾಗಿ ಔಷಧಿಗಳನ್ನು ವಿತರಿಸುವ ವಿನೂತನ ಕಾರ್ಯಕ್ರಮ ಇದಾಗಿದೆ. ಪೂಜ್ಯರು ಕೊಡಗಿನ ಪೊನ್ನಂಪೇಟೆಯ ಶ್ರೀರಾಮಕೃಷ್ಣ-ಶಾರದಾಶ್ರಮದ ಮುಖ್ಯಸ್ಥರಾಗಿದ್ದಾಗ ಕೊಡಗಿನ ಕಾಫಿ ತೋಟದ ಸಹಸ್ರ ಕಾರ್ಮಿಕ ಮಾತೆಯರಿಗಾಗಿ ಪ್ರಪ್ರಥಮವಾಗಿ ಈ ಕಾರ್ಯಕ್ರಮವು ಆಯೋಜನೆಗೊಂಡು ಯಶಸ್ವಿಯಾದ ನಂತರ ರಾಜ್ಯದ ಉದ್ದಗಲಕ್ಕೂ ಈ ಕಾರ್ಯಕ್ರಮವು ಕಾಳ್ಗಿಚ್ಚಿನಂತೆ ಹಬ್ಬಿತು. ೧೯೯೭ರಿಂದ ಜೀವಂತ ದುರ್ಗಾಪೂಜೆಯನ್ನು ವ್ಯವಸ್ಥೆಗೊಳಿಸುತ್ತಾ ಬಂದ ತುಮಕೂರಿನ ರಾಮಕೃಷ್ಣ-ವಿವೇಕಾನಂದ ಆಶ್ರಮವು ಅದಾಗಲೇ ಎಂಟು ಸಹಸ್ರ ಅಶಕ್ತ ಮಾತೆಯರಿಗೆ ಜೀವಂತ ದುರ್ಗಾಪೂಜೆಯನ್ನು ಕೈಗೊಂಡು ಇದೀಗ ಬೆಳ್ಳಿಹಬ್ಬದ ಸಂಭ್ರಮದಲ್ಲಿದೆ.

## ೪. ಸಾಹಿತ್ಯ ಭಾಗೀರಥಿ

ಪೂಜ್ಯ ಸ್ವಾಮೀಜಿಯವರು ಗ್ರಂಥಾಧ್ಯಯನಕ್ಕೆ ವಿಶೇಷ ಪ್ರೇರಣೆ ನೀಡುತ್ತಿದ್ದರು. ಅವರೇ ಹೇಳುತ್ತಿದ್ದರು: ''ಉತ್ತಮ ಪುಸ್ತಕವು ಆದರ್ಶ ಮಾತೆಯಂತೆ, ಅದೊಂದು ಪವಿತ್ರ ದೇವಾಲಯವೇ ಸರಿ. ಓದುಗನಿಗೋ ವಾಚನಾಲಯವೆಂಬುದೇ ವೈಕುಂಠ. ಸಜ್ಜನರ ಸಹವಾಸದಲ್ಲಿರಲು ಸಿದ್ಧತೆ ಬೇಕು. ಈ ಸಿದ್ಧತೆಗೆ ಬೇಕೇಬೇಕು ಸದ್ಗ್ರಂಥಗಳ ಅಧ್ಯಯನ. ಉತ್ತಮ ಪುಸ್ತ ಕದ ಅಧ್ಯಯನವು ಮನಸ್ಸಿಗೆ ಬಲ ತುಂಬುತ್ತದೆ, ಬುದ್ಧಿಯಲ್ಲಿ ವಿವೇಕ ಮೂಡಿಸುತ್ತದೆ, ಹೃದಯವನ್ನು ತಿಳಿಯಾಗಿಸುತ್ತದೆ. ಒಟ್ಟಾರೆ ಜೀವನಕ್ಕೆ ಜ್ಯೋತಿಯಾಗಬಲ್ಲ ಪುಸ್ತಕವು ಚಿರಂಜೀವಿ ಆಗುತ್ತದೆ''.

### ಪೂಜ್ಯರು ರಚಿಸಿದ ದಿವ್ಯತ್ರಯರ ಸಾಹಿತ್ಯ

ಪೂಜ್ಯರು ಶ್ರೀಮಾತೆ ಶಾರದಾದೇವಿಯವರನ್ನು ಕುರಿತು ರಚಿಸಿದ 'ಶ್ರೀಶಾರದಾದೇವಿ ಜೀವನಗಂಗಾ' ಬೃಹತ್ ಗ್ರಂಥವು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವೈಶಿಷ್ಟ್ಯಪೂರ್ಣವಾದದ್ದು. ಖ್ಯಾತ ಸಾಹಿತಿಗಳಾದ ಪ್ರೊ. ದೇಜಗೌರವರು, ತಮ್ಮ ಜೀವನ ಚರಿತ್ರೆಯನ್ನು ಅರ್ಥಪೂರ್ಣವಾಗಿ ಬರೆಯಲು ಸ್ವತಃ ಶ್ರೀಮಾತೆಯವರೇ ಸ್ವಾಮಿ ಪುರುಷೋತ್ತಮಾನಂದರನ್ನು ಕರೆತಂದಿದ್ದಾರೆ. ಪೂಜ್ಯರು ಶ್ರೀಮಾತೆಯವರ ಮಾನಸಪುತ್ರರೇ ಸರಿ ಎಂದು ಭಕ್ತಿಭಾವದಿಂದ ನುಡಿದಿದ್ದಾರೆ. ಹೃದಯ ಚಿಕಿತ್ಸೆಗೆ ಒಳಗಾಗಿ ವಿಶ್ರಾಂತಿ ಪಡೆಯುತ್ತಿದ್ದ ಪೂಜ್ಯ ಸ್ವಾಮಿ ಹರ್ಷಾನಂದರು 'ಶ್ರೀ ಶಾರದಾದೇವಿ ಜೀವನಗಂಗಾ' ಪುಸ್ತಕವನ್ನೋದಿ, ''ಪುರುಷೋತ್ತಮಾನಂದರು ಬರೆದ 'ಶ್ರೀ ಶಾರದಾದೇವಿ ಜೀವನಗಂಗಾ' ಪುಸ್ತಕವು ವಿಷಯ ಸಂಗ್ರಹ, ಪ್ರಸ್ತಾವನೆ, ನಿರೂಪಣೆ – ಇವುಗಳ ವಿಷಯದಲ್ಲಿ ಸಮಗ್ರವೂ ಅಪೂರ್ವವೂ ಆಗಿದೆ'' ಎಂದಿದ್ದಾರೆ.

ಪ್ರಥಮವಾಗಿ ನಾಲ್ಕು ಸಂಪುಟಗಳಲ್ಲಿ ಭಗವಾನ್ ಶ್ರೀರಾಮಕೃಷ್ಣರ ಜೀವನ ಚರಿತ್ರೆಯನ್ನು **ಯುಗಾವತಾರ ಶ್ರೀರಾಮಕೃಷ್ಣ** ಎಂಬ ಶಿರೋನಾಮೆಯಲ್ಲಿ ಪೂಜ್ಯರು ರಚಿಸಿದರು. ಈ ಸಂಪುಟಗಳನ್ನು ಶ್ರದ್ಧೆಯಿಂದ ಅಧ್ಯಯನಗೈದ ಕನ್ನಡದ ಖ್ಯಾತ ಕವಿಗಳಾದ ಪ್ರೊ. ನಿಸಾರ್ ಅಹಮದ್‌ರವರು, ''ಜೀವನಚರಿತ್ರೆಗಳಲ್ಲಿ ಕಲಶಪ್ರಾಯ'' ಎಂದು ಅವುಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಕನ್ನಡ ಸಾರಸ್ವತ ಲೋಕಕ್ಕೆ ಪೂಜ್ಯರು, ಸ್ವಾಮಿ ವಿವೇಕಾನಂದರ ಜೀವನ–ಸಂದೇಶಗಳನ್ನು **ವೀರಸಂನ್ಯಾಸಿ ವಿವೇಕಾನಂದ, ವಿಶ್ವವಿಜೇತ ವಿವೇಕಾನಂದ** ಮತ್ತು **ವಿಶ್ವಮಾನವ ವಿವೇಕಾನಂದ** ಎಂಬ ಮೂರು ಸಂಪುಟಗಳಲ್ಲಿತ್ತು ಮಹತ್ತರ ಕಾರ್ಯಗೈದಿದ್ದಾರೆ. ಸ್ವಾಮಿ ವಿವೇಕಾನಂದರ ಸಮಗ್ರ ಜೀವನ ಚರಿತ್ರೆಯು ಕನ್ನಡದಲ್ಲಿ ಇಷ್ಟು ವಿಸ್ತೃತವಾಗಿ ಲಭ್ಯವಾದುದು ಇದೇ ಮೊದಲು. ಈ ಪುಸ್ತಕಕ್ಕೆ ಡಾ. ದೇಜಗೌ ಪ್ರತಿಷ್ಠಾನದಿಂದ ವಿಶ್ವಮಾನವ ಪ್ರಶಸ್ತಿ ಪ್ರಾಪ್ತವಾಯಿತು.

ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ಮತ್ತು ಸಂದೇಶಗಳ ಅಧ್ಯಯನದ ಅವಶ್ಯಕತೆ ಕುರಿತು ಪೂಜ್ಯ ಸ್ವಾಮೀಜಿ ಹೀಗೆ ಹೇಳುತ್ತಾರೆ: ''ಸ್ವಾಮಿ ವಿವೇಕಾನಂದರನ್ನು ಅಧ್ಯಯನ ಮಾಡುವುದೆಂದರೆ ಸಮಗ್ರ ಭಾರತವನ್ನು ಒಳಹೊಕ್ಕು ವೀಕ್ಷಿಸಿದಂತೆ. ಸಮಗ್ರ ಹಿಂದೂ ಧರ್ಮವನ್ನು ಅರಿತು ಮೈಗೂಡಿಸಿಕೊಂಡಂತೆ. ಅಷ್ಟೇ ಅಲ್ಲ, ವಿಶ್ವ ಭ್ರಾತೃತ್ವದ ವಿಶಾಲ ಭಾವವನ್ನು ಅಭ್ಯಸಿಸಿದಂತೆ; ಪರಿಪೂರ್ಣ ಮಾನವತೆಯ ಮರ್ಮವನ್ನು ಮಥಿಸಿ ಮನನ ಮಾಡಿದಂತೆ!... ಸಮಾಜದ ಎಲ್ಲ ಸ್ತರಗಳ ಜನರೂ ವಿವೇಕಾನಂದರ ಜೀವನ ಸಂದೇಶಗಳನ್ನು ಅಧ್ಯಯನ ಮಾಡಿದ್ದೇ ಆದರೆ, ರಾಷ್ಟ್ರವು ಅಪೇಕ್ಷಿಸುವ ಶ್ರೇಷ್ಠ ವ್ಯಕ್ತಿಗಳ ನಿರ್ಮಾಣವಾಗುವುದು ಖಂಡಿತ... ನಮ್ಮ ರಾಷ್ಟ್ರವನ್ನು ಕಟ್ಟಬೇಕಾದವರು ನಾವೇ ಹೊರತು ಪರಕೀಯರಲ್ಲ. ಆದರೆ ರಾಷ್ಟ್ರನಿರ್ಮಾಣಕಾರ್ಯ ಯಶಸ್ವಿಯಾಗುವುದು ಮೂರ್ಖರಿಂದಲ್ಲ, ಬಾಯಿ ಬಡುಕರಿಂದಲ್ಲ; ಶೀಲವಂತರಿಂದ, ವಿವೇಕಿಗಳಿಂದ. ನಮ್ಮ ರಾಷ್ಟ್ರದ ಕೋಟಿಕೋಟಿ ಜನರು ಸಿನಿಮಾ–ಟಿ.ವಿ.ಗಳನ್ನು ನೋಡಿಕೊಂಡು ವಿಲಾಸದಲ್ಲಿ ಮೈಮರೆಯುತ್ತ ಖುಷಿಯಾಗಿರಲಿ, ನಷ್ಟವೇನೂ ಇಲ್ಲ. ಆದರೂ ಬುದ್ಧಿವಂತರೂ ಜವಾಬ್ದಾರಿ ಅರಿತವರೂ ವಿವೇಕಿಗಳೂ ಆದ ಚಿಂತನಶೀಲ ಜನರು ಸ್ವಾಮಿ ವಿವೇಕಾನಂದರನ್ನು ಅಧ್ಯಯನ ಮಾಡಿ ರಾಷ್ಟ್ರನಿರ್ಮಾಣಕ್ಕೆ ಟೊಂಕ ಕಟ್ಟದಿದ್ದರೆ ಪ್ರಮಾದವಾಗದಿರದು''

### ಇತರ ಗ್ರಂಥಗಳು

ಪೂಜ್ಯರು ಬರೆದ ಮತ್ತೆ ಕೆಲವು ಪುಸ್ತಕಗಳೆಂದರೆ 'ಬ್ರಹ್ಮಾನುಭವಿ', ಮಾನವಜೀವನ–ಆಶಾಪುರಾಣ, ಸಾಧಕಯೋಧ, ಅಧ್ಯಾತ್ಮದ ಸೂಕ್ತ, ಚಿಂತನ–ಮಂಥನ, ಸಹನೆಯ ಸಂದೇಶ, ಶಾಂತಿಯ ಹರಕೆ, ವಿನಯಮೂರುತಿ ಶ್ರೀರಾಮಕೃಷ್ಣ, ಶ್ರೀಶಾರದಾದೇವಿ ಸಂದೇಶ ಮಂದಾರ, ಮರೆಯೊಳಗಿನ ಮಹಾದೇವಿ, ಶ್ರೀ ವಿವೇಕಗುರು ವಚನ ಇತ್ಯಾದಿ.

### ಸಾಹಿತ್ಯ ಪ್ರಸರಣ

ಪೂಜ್ಯ ಸ್ವಾಮಿ ಪುರುಷೋತ್ತಮಾನಂದರಿಗೆ ಸಂನ್ಯಾಸದೀಕ್ಷೆಯನ್ನು ಅನುಗ್ರಹಿಸಿದ್ದ ಪರಮಪೂಜ್ಯ ಸ್ವಾಮಿ ವೀರೇಶ್ವರಾನಂದರು ಹೇಳುತ್ತಿದ್ದುದ್ದುಂಟು: ''ದಿವ್ಯತ್ರಯರಿಗೆ ನಾವು ಸಲ್ಲಿಸಬಹುದಾದ ಶ್ರೇಷ್ಠ ಮಟ್ಟದ ಸೇವೆಯೆಂದರೆ ಅವರ ಪವಿತ್ರ ಜೀವನ ಸಂದೇಶಗಳನ್ನು ಮನೆಮನೆಗೆ ತಲುಪಿಸುವುದು.'' ಈ ಮಾತಿನಿಂದ ಸಾಕಷ್ಟು ಪ್ರಭಾವಿತರಾಗಿದ್ದ ಪೂಜ್ಯ ಸ್ವಾಮಿ ಪುರುಷೋತ್ತಮಾನಂದರು ನಾಡಿನಾದ್ಯಂತ 'ಮನೆ ಬಾಗಿಲಿಗೆ ಸರಸ್ವತೀ' ಎಂಬ ಯೋಜನೆಯ ಅಡಿಯಲ್ಲಿ ಸ್ವಯಂಸೇವಕರು ಮನೆಮನೆಗೆ ಪುಸ್ತಕಗಳನ್ನು ಹೊತ್ತು ಮಾರುವ ಕಾರ್ಯಕ್ರಮವನ್ನು ಪ್ರೋತ್ಸಾಹಿಸುತ್ತಿದ್ದರು. ಸ್ವಾಮೀಜಿ ನೂರು ಮನೆಗಳ ಬಾಗಿಲು ತಟ್ಟಿದರೆ ಪುಸ್ತಕ ಕೊಳ್ಳುವವರು ನಾಲ್ಕೈದು ಮನೆಯವರು ಮಾತ್ರ! ಪುಸ್ತಕ ಕೊಳ್ಳದಿದ್ದರೂ ಪರವಾಗಿಲ್ಲ ಆದರೆ ಕೆಲವೊಮ್ಮೆ ಬೈಗುಳವನ್ನು ಕೇಳಬೇಕು! ಎಂದು ಸ್ವಯಂಸೇವಕರು ಪೂಜ್ಯರಲ್ಲಿ ದೂರಿದಾಗ ಅವರೆನ್ನುತ್ತಿದ್ದುದು: ''ನೋಡು, ಆ ನಾಲ್ಕು ಮನೆಗಳು ಸದ್ಯಕ್ಕೆ ನಮ್ಮವು, ಉಳಿದವರು ಕಾಲಾಂತರದಲ್ಲಿ ಬರುತ್ತಾರೆ! ಇನ್ನು ಬೈಗುಳದ ಬಗ್ಗೆ ಅತಿಯಾಗಿ ತಲೆಕೆಡಿಸಿಕೊಳ್ಳಬಾರದು'' ಎಂದು.

## ೫. ಸಮರ್ಥ ಸಂಘಟಕ ಹಾಗು ತ್ಯಾಗಿಗಳ ನಿರ್ಮಾತೃ

ಪೂಜ್ಯರು ಬರೆದ ಕರ್ನಾಟಕದ 'ಯುವಜನತೆಗೊಂದು ಕರೆ' ಎಂಬ ಪುಟ್ಟ ಪುಸ್ತಕವು, ತರೀಕೆರೆಯ ಜಾನಪದ ಸಾಹಿತಿ ಶ್ರೀ ಕೆ.ಆರ್.ಲಿಂಗಪ್ಪನವರು ಸಂಘ–ಸಂಸ್ಥೆಗಳನ್ನು ಕಟ್ಟಿ ಬೆಳೆಸುವುದು ಹೇಗೆ? ಎಂದು ಪ್ರಶ್ನಿಸಿ ಮಾರ್ಗದರ್ಶನಕ್ಕಾಗಿ ವಿನಂತಿಸಿದಾಗ ಪೂಜ್ಯರಿಂದ ಮೂಡಿಬಂದದ್ದು. ಈ ಪುಟ್ಟ ಪುಸ್ತಕವು ನಾಡಿನುದ್ದಕ್ಕೂ ವಿವೇಕಾನಂದ ವಿಚಾರ ವೇದಿಕೆ, ವಿವೇಕಾನಂದರ ಸೇವಾ ಕೇಂದ್ರ, ಶ್ರೀರಾಮಕೃಷ್ಣ ಸತ್ಸಂಗ ಕೇಂದ್ರ, ವಿವೇಕಾನಂದ ಶಕ್ತಿ ಸಂಚಲನ, ಶ್ರೀ ಶಾರದಾದೇವಿ ಆಧ್ಯಾತ್ಮಿಕ ಮಂದಿರ, ಶ್ರೀಶಾರದಾದೇವಿ ಅಂಧರ ವಿಕಾಸ ಕೇಂದ್ರ, ಮುಂತಾದ ಹೆಸರುಗಳಲ್ಲಿ ಸರಿಸುಮಾರು ೩೦–೪೦ ಕೇಂದ್ರಗಳು ಸ್ಥಾಪನೆಗೊಳ್ಳಲು ಪ್ರೇರಣಾದಾಯಕವಾಯಿತು.

ಧಾರವಾಡದಲ್ಲಿ ೧೯೮೯ರಲ್ಲಿ ಅಖಿಲ ಕರ್ನಾಟಕ ವಿವೇಕಾನಂದ ಯುವ ಮಹಾಮಂಡಲ ಎಂಬ ಸಂಸ್ಥೆಯನ್ನು ಪೂಜ್ಯ

ಸ್ವಾಮೀಜಿಯವರು ಶ್ರೀ ಶಿವಕುಮಾರ್ (ಪ್ರಸ್ತುತ ಪೂಜ್ಯ ಸ್ವಾಮಿ ನಿರ್ಭಯಾನಂದರು) ಅವರ ನೇತೃತ್ವದಲ್ಲಿ ಸ್ಥಾಪಿಸಿದರು. ಒಂದರ್ಥ ದಲ್ಲಿ ಇಡೀ ಉತ್ತರ ಕರ್ನಾಟಕದಲ್ಲಿ ರಾಮಕೃಷ್ಣ-ವಿವೇಕಾನಂದ ಆಂದೋಲನಕ್ಕೆ ಈ ಕಾರ್ಯಕ್ರಮವೇ ಗಂಗೋತ್ರಿ! ತದನಂತರ ದಲ್ಲಿ ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ಆಶ್ರಮಗಳು ಸ್ಥಾಪನೆ ಗೊಂಡವು. ಉತ್ತರ ಕರ್ನಾಟಕದಲ್ಲಿ ೧೯೮೯, ೯೦, ೯೧, ೯೨ ಮತ್ತು ೯೩ನೇ ಇಸವಿಗಳಲ್ಲಿ ಅತ್ಯಂತ ಉತ್ಸಾಹದಿಂದ ಸತ್ಸಂಗ ಪ್ರವಾಸಗೈದ ಪೂಜ್ಯ ಸ್ವಾಮೀಜಿಯವರಿಗೆ ಮುಂದಿನ ದಶಕದಲ್ಲಿ ದಿವ್ಯತ್ರಯರ ಸೇವೆಗೈಯ್ಯಲು ತಾವು ಬೆಳಗಾವಿಗೆ ಬರಬೇಕಾಗು ತ್ತದೆ ಎಂಬ ಕಲ್ಪನೆಯೇ ಇದ್ದಂತಿಲ್ಲ!

**ತ್ಯಾಗಿಗಳ ನಿರ್ಮಾಣ:** ಸತ್ಸಂಗ ಕೇಂದ್ರಗಳು ತ್ಯಾಗಿಗಳಿಂದ ಕಾರ್ಯನಿರ್ವಹಿಸುತ್ತಾ ಸಾಗಿದಂತೆ ಆಶ್ರಮಗಳಾಗಿ ಪದೋನ್ನತ ಗೊಂಡವು. ಆಗ ಎಲ್ಲಿ ಶ್ರೀರಾಮಕೃಷ್ಣ ಮಠ ಮತ್ತು ಮಿಷನ್ ಶಾಖೆ ಗಳಿಲ್ಲವೋ ಅಲ್ಲಿ ಸ್ವತಂತ್ರ ಆಶ್ರಮಗಳು ಸ್ಥಾಪನೆಗೊಂಡವು. ಅವು ಗಳ ಸ್ಥಾಪನೆಗೆ ಮೂಲ ಪ್ರೇರಕ ಶಕ್ತಿ ಪೂಜ್ಯ ಸ್ವಾಮಿ ಪುರುಷೋತ್ತ ಮಾನಂದರಾದರೆ ಈ ಎಲ್ಲ ಆಶ್ರಮಗಳಿಗೆ ರಾಮಕೃಷ್ಣ-ವಿವೇ ಕಾನಂದ ಆಶ್ರಮ ಎಂದು ಹೆಸರನ್ನು ಸೂಚಿಸಿದವರು ಪೂಜ್ಯ ಸ್ವಾಮಿ ಹರ್ಷಾನಂದಜಿರವರು.

ಪೂಜ್ಯ ಸ್ವಾಮಿ ಪುರುಷೋತ್ತಮಾನಂದರ ದಿವ್ಯಪ್ರಭಾವದಿಂದ ಒಂದುನೂರಕ್ಕೂ ಅಧಿಕ ಯುವಕ-ಯುವತಿಯರು ತ್ಯಾಗಜೀವ ನಕ್ಕೆ ಮನಸೋತು ಸಂನ್ಯಾಸಜೀವನ ಸ್ವೀಕರಿಸಿದರು. ಇವರಲ್ಲಿ ಶೇ.೪೦ರಷ್ಟು ತ್ಯಾಗೀ ಯುವಕರು ರಾಮಕೃಷ್ಣ ಮಿಷನ್ನಿಗೆ ಸೇರ್ಪಡೆ ಗೊಂಡರೆ ಉಳಿದವರು ಸ್ವತಂತ್ರ ಆಶ್ರಮಗಳನ್ನು ಸ್ಥಾಪಿಸಿಕೊಂಡು ದಿವ್ಯತ್ರಯರ ಸೇವಾಕಾರ್ಯಕ್ಕೆ ಸನ್ನದ್ಧರಾದರು. ಈ ಶತಮಾನದ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಇದೊಂದು ಬಹುದೊಡ್ಡ ಕ್ರಾಂತಿ!

**ವಿವೇಕ ಪ್ರವಚನ; ಚಿಂತನ ಚಳುವಳಿ**

ಪೂಜ್ಯ ಸ್ವಾಮೀಜಿಯವರು ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದ ಹೊಣೆಗಾರಿಕೆ ಹೊತ್ತು ಕಾರ್ಯಪ್ರವೃತ್ತರಾದ ಒಂದೆರಡು ವರ್ಷಗಳಲ್ಲೇ ಸುಮಾರು ಮೂವತ್ತಕ್ಕೂ ಹೆಚ್ಚು ಬ್ರಹ್ಮ ಚಾರಿ ಸಾಧಕರು ಆಶ್ರಮ ಸೇರಿದರು. ಇದೊಂದು ಇತಿಹಾಸವೇ ಸರಿ!

ಪೊನ್ನಂಪೇಟೆಯಲ್ಲಿದ್ದಾಗ ಹೆಚ್ಚಿನ ಸಮಯವನ್ನು ಪೂಜ್ಯ ಸ್ವಾಮೀಜಿಯವರು ಕರ್ನಾಟಕದಾದ್ಯಂತ ಆಗಿಂದಾಗ್ಗೆ ಪ್ರವಾಸ ಕೈಗೊಂಡು ತಮ್ಮ ಅಮೋಘ ಭಜನೆ, ವಿಶಿಷ್ಟ ಪ್ರವಚನ ಹಾಗೂ ಸಾಹಿತ್ಯ ಪ್ರಸರಣದ ಮೂಲಕ ದಿವ್ಯತ್ರಯರ ಚಿಂತನೆಗಳು ರಾಜ್ಯದ ಮೂಲೆಮೂಲೆಗಳಲ್ಲಿ ಮನೆಮಾತಾಗುವಂತೆ ಮಾಡಿದರು. ಪೂಜ್ಯರು ಇಡೀ ಕರ್ನಾಟಕದಾದ್ಯಂತ ಒಂದು ನೂರಕ್ಕೂ ಅಧಿಕ ಸಂಖ್ಯೆಯ ತಾಲ್ಲೂಕು ಕೇಂದ್ರಗಳಲ್ಲಿ ಸತ್ಸಂಗ ಪ್ರವಾಸ ಕೈಗೊಂಡರು. ನೂರಾರು ಊರುಗಳ ಭಕ್ತಜನರು ರಾಮಕೃಷ್ಣ ಆಂದೋಲನಕ್ಕೆ ಮನಸೋತು ಶರಣಾದರು, ಸಾವಿರಾರು ಸಂಖ್ಯೆಯಲ್ಲಿ ಶ್ರೀರಾಮಕೃಷ್ಣ ಮಠ ದಿಂದ ಮಂತ್ರದೀಕ್ಷೆ ಪಡೆದು ಸಾಧನ ಪ್ರವೃತ್ತರಾದರು.

ಬೆಳಗಾವಿಯಲ್ಲಿ ಸ್ವಾಮಿ ವಿವೇಕಾನಂದರು ಅಮೆರಿಕಾಗೆ ತೆರ ಳುವ ಮೊದಲು ತಮ್ಮ ಪರಿವ್ರಾಜಕ ದಿನಗಳಲ್ಲಿ ತಂಗಿದ್ದ ಅರಣ್ಯಾಧಿ ಕಾರಿ ಶ್ರೀ ಹರಿಪದ ಮಿತ್ರನ ನಿವಾಸದಲ್ಲಿ ರಾಮಕೃಷ್ಣ ಮಿಷನ್ ತನ್ನ ನೂತನ ಶಾಖೆಯನ್ನು ಆರಂಭಿಸಿ ಪೂಜ್ಯ ಸ್ವಾಮಿ ಪುರುಷೋತ್ತಮಾ ನಂದರನ್ನು ಮುಖ್ಯಸ್ಥರಾಗಿ ನಿಯೋಜಿಸಿತು. ಅರ್ಧಶತಮಾನದಲ್ಲಿ ಮಾಡಬಹುದಾದ ಕಾರ್ಯವನ್ನು ಐದೇ ವರ್ಷದಲ್ಲಿ ಅತ್ಯಂತ ಯಶಸ್ವಿಯಾಗಿ ಪೂಜ್ಯರು ನಿರ್ವಹಿಸಿ ಸರ್ವರ ಗೌರವಾದರಗಳಿಗೆ ಪಾತ್ರರಾದರು.

**ಜೀವನಕಲೆ; ಅಧ್ಯಾತ್ಮದ ನೆಲೆ**

ಆಶ್ರಮಗಳನ್ನು ಪ್ರವಾಸಿ ತಾಣಗಳಾಗಿಸದೆ, ಕೇವಲ ಪ್ರೇಕ್ಷ ಣೀಯ ಸ್ಥಳಗಳಾಗಿಸದೆ ತೀರ್ಥಕ್ಷೇತ್ರದ ಸ್ವರೂಪವಿತ್ತು ಮುಂದು ವರೆಸಿದವರು ಪೂಜ್ಯ ಸ್ವಾಮಿ ಪುರುಷೋತ್ತಮಾನಂದರು. ಪೂಜ್ಯರ ಸಂಪರ್ಕಕ್ಕೆ ಬಂದ ಸಹಸ್ರಾರು ಜನರು ಸಾಧನಾ ಜೀವನದತ್ತ ಹೆಜ್ಜೆ ಹಾಕತೊಡಗಿದರು.

**ಅಧ್ಯಯನ ಸಂಕಲ್ಪವ್ರತ**

ನಾಡಿನಾದ್ಯಂತ ಶ್ರದ್ಧಾವಂತ ಭಕ್ತಜನರು ದಿವ್ಯತ್ರಯರ ಜೀವನ -ಸಂದೇಶಗಳನ್ನು ಆಮೂಲಾಗ್ರವಾಗಿ ಅವಲೋಕಿಸಲು ಅನು ವಾಗುವಂತೆ ಅಧ್ಯಯನ ಸಂಕಲ್ಪ ವ್ರತಗಳನ್ನು ಪೂಜ್ಯರು ಪ್ರಾರಂ ಭಿಸಿದರು. ೧೯೮೮ರಿಂದ ೨೦೦೪ರವರೆಗೆ ರಾಜ್ಯದಾದ್ಯಂತ ಸಹ ಸ್ರಾರು ಕುಟುಂಬಗಳು ಅಧ್ಯಯನ ಸಂಕಲ್ಪ ವ್ರತಕ್ಕೆ ಹೆಸರುಗಳನ್ನು ನೊಂದಾಯಿಸಿ ದಿವ್ಯತ್ರಯರ ಜೀವನ ಸಂದೇಶಗಳ ಅಧ್ಯಯನಕ್ಕೆ ವ್ರತಧಾರಿಗಳಾದರು.

**ಸಂತರ ಸಮೂಹದಲ್ಲಿ ಅಪೂರ್ವಸಂತ**

ಕರ್ನಾಟಕ ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿರುವ ವಿವಿಧ ಸಂಪ್ರದಾಯಗಳ ಸಂತಶ್ರೇಷ್ಠರು ಪೂಜ್ಯ ಸ್ವಾಮಿ ಪುರುಷೋತ್ತಮಾ ನಂದರ ದಿವ್ಯವ್ಯಕ್ತಿತ್ವದೊಂದಿಗೆ ಒಡನಾಡಿ ರಾಮಕೃಷ್ಣ ಭಾವಧಾರೆಗೆ ಹತ್ತಿರವಾದರು. ಎಲ್ಲ ಸಂಪ್ರದಾಯದವರೂ ಪೂಜ್ಯರನ್ನು ಅತ್ಯಂತ ಗೌರವದಿಂದ ಕಂಡರು.

ಪೇಜಾವರ ಮಠದ ಬ್ರಹ್ಮಲೀನ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳು: ''ನಮ್ಮ ಪುರುಷೋತ್ತಮಾನಂದರು ಒಂದರ್ಥದಲ್ಲಿ ಸವ್ಯಸಾಚಿಗಳು! ಅವರು ಅತ್ಯುತ್ತಮವಾಗಿ ಹಾಡಬಲ್ಲರು; ಅತ್ಯಂತ ಪರಿಣಾಮಕಾರಿಯಾಗಿ ಉಪನ್ಯಾಸವನ್ನೂ ನೀಡಬಲ್ಲರು'' ಎಂದರು. ಬೇಲಿಮಠ ಸಂಸ್ಥಾನದ ಪೂಜ್ಯ ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರಮಹಾಸ್ವಾಮಿಗಳು: ''ಸ್ವಾಮಿ ಪುರುಷೋತ್ತಮಾನಂದರು ಕಳೆದ ನಾಲ್ಕೂವರೆ ದಶಕಗಳಲ್ಲಿ ಬಿತ್ತಿದ ಯಾವ ಬೀಜವೂ ನಿಷ್ಫಲ ವಾಗಿಲ್ಲ'' ಎಂದಿದ್ದಾರೆ.

ಬ್ರಹ್ಮಲೀನ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮಿಗಳು ಹೇಳುತ್ತಾರೆ: ''ಸ್ವಾಮಿ ಪುರುಷೋತ್ತಮಾನಂದರು ನಾದಯೋಗಿಗಳು, ಪುರು ಷೋತ್ತಮಸ್ಥಿತಿಗೇರಿದ ತ್ಯಾಗಿಗಳು, ಆತ್ಮಜ್ಞಾನರಸವನ್ನುಂಡ ಅನು ಭಾವಿಗಳು. ಅವರ ಮಾತಿನೊಳಗೆಲ್ಲ ಹಾಡು; ಅವರ ಹಾಡಿ

ನೊಳಗೆಲ್ಲ ಬೋಧ! ಅದು ಅವರ ಸಂಪದ; ಅದನ್ನು ಹಂಚಿ ಹರ್ಷಿಸುವುದು ಅವರ ಕಾಯಕ....''

ಕೆಲವು ವರ್ಷಗಳ ಹಿಂದೆ ಬೆಂಗಳೂರು ಬಸವನಗುಡಿಯ ರಾಮಕೃಷ್ಣ ಮಠಕ್ಕೆ ಭೇಟಿ ನೀಡಿದ್ದ ಮಥುರಾ-ಬೃಂದಾನವದ ರಮಣರೇತಿ ಕ್ಷೇತ್ರದ ಮಹಾಮಂಡಲೇಶ್ವರರಾದ ಪರಮಪೂಜ್ಯ ಶ್ರೀಶ್ರೀ ಗುರುಶರಣಾನಂದಜೀ ಮಹಾರಾಜ್‌ರವರು ಪೂಜ್ಯ ಸ್ವಾಮಿ ಪುರುಷೋತ್ತಮಾನಂದರು ೩೦ ವರ್ಷಗಳಿಗೂ ಅಧಿಕ ಕಾಲ ತಂಗಿದ್ದ ಕೊಠಡಿಯನ್ನು ಕಂಡು, ತಮ್ಮ ಪಾದುಕೆಗಳನ್ನು ಬದಿಗಿತ್ತು, ಕೊಠಡಿಯತ್ತ ಕೈಮುಗಿದು ಹೇಳುತ್ತಾರೆ: ''ಈ ಕೊಠಡಿ ನಿಜಕ್ಕೂ ಒಂದು ತೀರ್ಥಕ್ಷೇತ್ರ, ಇಲ್ಲಿ ಮಹಾನ್ ಸಂತರು ವಾಸವಾಗಿದ್ದರು, ಅವರು ಅಸಂಖ್ಯಾತ ಸಾಧಕರಿಗೆ ದಾರಿದೀಪವೂ ಆಗಿದ್ದರು. ಈಗಲೂ ಆಗಿದ್ದಾರೆ''.

## ಗಣ್ಯಮಾನ್ಯರ ಶ್ಲಾಘನೆ

ರಾಷ್ಟ್ರಕವಿ ಡಾ. ಜಿ.ಎಸ್.ಶಿವರುದ್ರಪ್ಪ, ಸಾಹಿತ್ಯಪುಂಗವ ಪ್ರೊ. ಟಿ.ಎಸ್.ಶ್ಯಾಮರಾಯರು, ಸುಪ್ರಸಿದ್ಧ ಕವಿಗಳಾದ ಪ್ರೊ. ನಿಸಾರ್ ಅಹಮದ್, ಪ್ರೊ.ಚನ್ನವೀರ ಕಣವಿ, ಪ್ರೊ. ವೃಷಭೇಂದ್ರಸ್ವಾಮಿ, ಪ್ರೊ.ಶಂಗು ಬಿರಾದಾರ್, ಡಾ. ದೇಜಗೌ, ಪತ್ರಿಕೋದ್ಯಮಿ ಶ್ರೀ ಸಂತೋಷ್‌ಕುಮಾರ್ ಗುಲ್ವಾಡಿ, ಶಿಕ್ಷಣತಜ್ಞರಾದ ಡಾ.ಡಿ.ಎಂ. ನಂಜುಂಡಪ್ಪ ಇವರುಗಳಲ್ಲದೆ ನಾಡಿನುದ್ದಕ್ಕೂ ಇರುವ ನೂರಾರು ಚಿಂತಕರು ಪೂಜ್ಯ ಸ್ವಾಮೀಜಿಯವರು ಯಶಸ್ವಿಯಾಗಿ ನೆರವೇರಿಸಿದ ಸಂಸ್ಕೃತಿ ಪ್ರಸರಣ ಕಾರ್ಯವನ್ನು ಮನಸಾರೆ ಕೊಂಡಾಡಿದ್ದಾರೆ.

## ಪೂಜ್ಯರು ನುಡಿದ ಧನ್ಯತೆಯ ಮಾತುಗಳು

ದಿವ್ಯತ್ರಯರ ಭಾವಧಾರೆಯ ಪಯಣದಲ್ಲಿ ನಾಲ್ಕೂವರೆ ದಶಕಗಳ ಕಾಲ ಸಾಗಿಬಂದ ತಮ್ಮ ಆಧ್ಯಾತ್ಮಿಕ ಜೀವನವನ್ನು ಮೆಲುಕು ಹಾಕುತ್ತಾ ಪೂಜ್ಯ ಸ್ವಾಮಿ ಪುರುಷೋತ್ತಮಾನಂದರು ಅಂತರಾಳದ ಈ ಮಾತುಗಳನ್ನು ಧನ್ಯತೆಯಿಂದ ಹೊರಗೆಡವಿದ್ದು ಹೀಗೆ: ''ನನ್ನ ಪೂಜ್ಯ ಗುರುಗಳಾದ ಸ್ವಾಮಿ ಯತೀಶ್ವರಾನಂದರು ಮತ್ತೆ ಮತ್ತೆ ಹೇಳುತ್ತಿದ್ದ ಮಾತು, ' I want to live from minute to minute.' ಇದು ಸಮಯವನ್ನು ಅತ್ಯಂತ ಗೌರವದಿಂದ ಸದುಪಯೋಗಪಡಿಸಿಕೊಳ್ಳಬೇಕೆಂಬ ಪಾಠ ಕಲಿಸಿತು.. ಸಾಧುಸಂಗದಿಂದ ಸದಸದ್ವಿಚಾರ ಬೆಳೆಯುತ್ತದೆ ಎಂಬ ಭಗವಾನ್ ಶ್ರೀರಾಮಕೃಷ್ಣರ ಮಾತು ಜೀವನದುದ್ದಕ್ಕೂ ಚೇತೋಹಾರಿಯಾಗಿರಲು ಅನುವು ಮಾಡಿಕೊಟ್ಟಿತು. ದೀನರಲ್ಲಿ ದರ್ಪ ದೋರುತ್ತ, ಶಕ್ತರ ಮುಂದೆ ಮೆತ್ತಗಿರುವ, ಅಧಿಕಾರಿಗಳ ಮುಂದೆ ಮುದುಡಿಕೊಂಡಿರುವಂಥವನು ಎಷ್ಟೇ ವಿದ್ಯಾವಂತನಾದರೂ ಆತ ಒಬ್ಬ ಆತ್ಮವಿಶ್ವಾಸವುಳ್ಳ ಕೂಲಿಗಿಂತಲೂ ಕಡೆ!.... ಜೀವನದಲ್ಲಿ ಪಾಠ ಕಲಿತೆ, ಕಲಿತ ಪಾಠವನ್ನು ಅನುಭಾವದ ನೆಲೆಯಲ್ಲಿ ಕಂಡೆ; ಗಳಿಸಿದ ಅನುಭವಾಮೃತವನ್ನು ಮಾತು ಮತ್ತು ಬರಹಗಳ ಮೂಲಕ ಶ್ರೀಮಾತೆಗೆ ನೈವೇದ್ಯವಾಗಿಸಿ, ಭಕ್ತಜನರಿಗೆ ಉಣಬಡಿಸಿ ಧನ್ಯತೆ ಪಡೆದೆ... ಭಗವಂತನು ನಮ್ಮ ಸ್ವಂತದವನೆಂದು ಭಾವಿಸಿದಾಗ ಅವನದ್ದೆಲ್ಲವೂ ನಮ್ಮದಾಗುತ್ತದೆ; ಭಗವಂತನು ನಮ್ಮ ಸ್ವಂತದವನಾದಾಗಲೇ ನಾವು ಸಂತರಾಗುವುದು... ದಿವ್ಯತ್ರಯರ ಕೃಪಾಶೀರ್ವಾದಗಳಿಂದ ಪ್ರಪಂಚಕ್ಕೆ ನಾನು ಕೊಟ್ಟಿದ್ದಕ್ಕಿಂತ ಪ್ರಪಂಚದಿಂದ ಪಡೆದದ್ದೇ ಅಧಿಕ. ಇದಕ್ಕಾಗಿ ದಿವ್ಯತ್ರಯರಿಗೆ ನಾನು ಚಿರಋಣಿ.''

## ಸಾರಾಂಶ

'ಶ್ರೀರಾಮಕೃಷ್ಣ ವಚನವೇದ' ಪವಿತ್ರ ಗ್ರಂಥದ ಮುನ್ನುಡಿಯ ಮಾತುಗಳಲ್ಲಿ ರಾಷ್ಟ್ರಕವಿ ಕುವೆಂಪು ಹೀಗೆ ಬರೆಯುತ್ತಾರೆ: ''....ಶ್ರೀರಾಮಕೃಷ್ಣ ವಚನವೇದವೆಂದರೆ ಅದೊಂದು ಕರತಲ ದೇವಸ್ಥಾನ, ಕರತಲ ತಪೋರಂಗ, ಕರತಲ ಪುಣ್ಯಕ್ಷೇತ್ರ. ಆದರೆ, ದೇವಸ್ಥಾನ, ಪುಣ್ಯಕ್ಷೇತ್ರಗಳಂತೆ ತಾನೆಂದಿಗೂ ಕಲುಷಿತವಾಗುವ ಸಂಭವವಿಲ್ಲ, ಶಿಥಿಲವಾಗುವ ಸಂಭವವಿಲ್ಲ.... ಇಲ್ಲಿ ವೇದ ವೇದಾಂತ ದರ್ಶನಾದಿ ಸರ್ವಸಾರವಿದೆ. ಓದು ಬರುವ ಅತ್ಯಂತ ಸಾಮಾನ್ಯನೂ ಇದನ್ನು ಓದಿದ ಮೇಲೆ ಯಾವ ಪಂಡಿತನಿಗೂ ಕರುಬುವ ಅವಶ್ಯಕತೆಯಿಲ್ಲ; ಯಾವ ವಿದ್ವತ್‌ಪೂರ್ಣವಾದ ತತ್ತ್ವಜ್ಞಾನಿಗೂ ಕೀಳೆಂದು ನಾಚಬೇಕಾಗಿಲ್ಲ. ಅದಕ್ಕೆ ಬದಲು ಭಗವಂತನ ಕೃಪೆಯಿಂದ ತನಗಿಂತಲೂ ಧನ್ಯರಿಲ್ಲ ಎಂದರಿತು ನಿರ್ಮಮನಾಗುತ್ತಾನೆ, ಶಾಂತನಾಗುತ್ತಾನೆ, ಪೂರ್ಣನಾಗುತ್ತಾನೆ...''.

'ಶ್ರೀರಾಮಕೃಷ್ಣ ವಚನವೇದ' ಪವಿತ್ರ ಗ್ರಂಥಾಧ್ಯಯನದಿಂದ ಪ್ರೇರಣೆ ಪಡೆದ ಸಾಮಾನ್ಯ ಗ್ರಾಮ್ಯ ಯುವಕ ರಾಮಚಂದ್ರ ದಿವ್ಯತ್ರಯರ ಕಾರ್ಯವೆಸಗುತ್ತಾ, ಆ ಆಧ್ಯಾತ್ಮಿಕ ಪಯಣದಲ್ಲಿ ಶಕ್ತಿಮೀರಿ ಶ್ರಮಿಸುತ್ತಾ ಸಾಗಿ ಇಂದು ಮಹಾತ್ಮರಾದದ್ದು ಪವಾಡವೇ ಸರಿ. ಪೂಜ್ಯ ಸ್ವಾಮಿ ಪುರುಷೋತ್ತಮಾನಂದರು, ತಮ್ಮದು ಪಾಂಡಿತ್ಯವೇನೂ ಇಲ್ಲದ ಭಾಷಣ ಎಂದು ಹೇಳುತ್ತಿದ್ದರು! ಆದರೆ ದಿವ್ಯತ್ರಯರ ಭಾವಧಾರೆಯೆಂಬ ಮಹಾನ್ ಗಂಗಾನದಿಯಲ್ಲಿ ಅವರೊಂದು ಉಪನದಿಯಾಗಿ ಹರಿದು ತಮ್ಮ ಗುರುತರ ಸೇವೆಯನ್ನು ಸಮರ್ಪಿಸಿದ್ದು ಗಮನೀಯ.

'ಶ್ರೀರಾಮಕೃಷ್ಣ ವಚನವೇದ'ದ ಅಧ್ಯಯನದಿಂದ ಸಾಮಾನ್ಯನೂ ಕೂಡ ಪಂಡಿತನನ್ನು ಕಂಡು ಕರುಬುವ ಅಥವಾ ವಿದ್ವತ್ ಪೂರ್ಣವಾದ ತತ್ತ್ವಜ್ಞಾನಿಗೂ ಕೀಳೆಂದು ನಾಚುವ ಅವಶ್ಯಕತೆಯಿಲ್ಲ ಎಂದಷ್ಟೇ ಹೇಳುವಲ್ಲಿ ಕುವೆಂಪು ಸಮರ್ಥರಾದರು. ಈ ಮಾತಿನ ಮುಂದುವರೆದ ಭಾಗವೇ ಪೂಜ್ಯ ಸ್ವಾಮಿ ಪುರುಷೋತ್ತಮಾನಂದರ ಜೀವನ ಸಾಧನೆಗಳು ಎಂದೆನಿಸುವುದಿಲ್ಲವೆ? ಸ್ವತಃ ಪುರುಷೋತ್ತಮಾನಂದರೇ ತಮ್ಮ ಬಗ್ಗೆ ತಾವೊಬ್ಬ ಪಾಂಡಿತ್ಯಪೂರ್ಣ ಭಾಷಣಕಾರನಲ್ಲವೆಂದು ಸಮರ್ಥಿಸಹೊರಟದ್ದೂ ಪೂರ್ಣ ಸತ್ಯವಲ್ಲ. ಏಕೆಂದರೆ ದಿವ್ಯತ್ರಯರ ಕೃಪಾಶೀರ್ವಾದದಿಂದ ಅವರೇ ಕಬೀರನ ಈ ದೋಹೆಗೆ ಸಾಕ್ಷಾತ್ ಉದಾಹರಣೆಯಾದರು. 'ನನ್ನದೆಂಬುದೇನಿಲ್ಲ, ಇರುವುದು ನಿನ್ನದೆ ಎಲ್ಲ, ನಿನ್ನದೇ ನಿನಗೆ ಅರ್ಪಿಸುತಲಿ, ನಮ್ಮದಿಯಿಂದಿರುವೆ' – ಈ ವಿನೀತ-ವಿನಮ್ರ ಭಾವನೆಯೇ ಸಾಮಾನ್ಯ ಗ್ರಾಮೀಣ ಯುವಕ ರಾಮಚಂದ್ರನನ್ನು ಆದರ್ಶ ಸಂನ್ಯಾಸಿ ಸ್ವಾಮಿ ಪುರುಷೋತ್ತಮಾನಂದರಾಗಿಸಿದ್ದು!